## ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1. | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1996 |
| 2. | ಮಾನ್ಯ ಸದಸ್ಯರ ಹೆಸರು | : | ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರದಿಂದ ಚುನಾಯಿತರಾದವರು) |
| 3. | ಉತ್ತರಿಸಬೇಕಾದ ದಿನಾಂಕ | : | 24.03.2026 |
| 4. | ಉತ್ತರಿಸುವ ಸಚಿವರು | : | ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ದಿನಾಂಕ:08.11.2025 ರಂದು ವಿಧಾನ ಸೌಧದಲ್ಲಿ ಸಭೆ ಸೇರಿ ಸಮಾಲೋಚನೆ ಮಾಡಿ ಕಬ್ಬಿಗೆ ಒಂದು ಬೆಲೆ ನಿಗದಿ ಪಡಿಸಲಾಗಿದೆಯೇ; ಹಾಗಿದ್ದರೆ, ಕಬ್ಬಿಗೆ ಪ್ರತಿ ಟನ್‌ಗೆ ಯಾವ ಬೆಲೆಯನ್ನು ನೀಡಲಾಗುತ್ತಿದೆ; (ವಿವರವಾದ ಮಾಹಿತಿ ನೀಡುವುದು) | ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ದಿನಾಂಕ:07.11.2025 ರಂದು ಜರುಗಿದ ರೈತರು ಮತ್ತು ಸಕ್ಕರೆ ಕಾರ್ಖಾನೆಗಳು ಮಾಲೀಕರುಗಳು / ಪ್ರತಿನಿಧಿಗಳ ಸಭೆಯಲ್ಲಿ ಪರಸ್ಪರ ಒಪ್ಪಿದ ಮೊತ್ತದಂತೆ, ಸರ್ಕಾರದ ದಿನಾಂಕ:08.11.2025 ರ ಆದೇಶದಂತೆ 2025-26ನೇ ಹಂಗಾಮಿನಲ್ಲಿ ಕಬ್ಬು ಸರಬರಾಜು ಮಾಡಿದ ರೈತರಿಗೆ ಮೊದಲನೇ ಕಂತಿನಲ್ಲಿ ಕೇಂದ್ರ ಸರ್ಕಾರದ ಎಫ್‌ಆರ್‌ಪಿ ದರದಂತೆ ಪಾವತಿಸಲು ಹಾಗೂ ತದನಂತರ ಎರಡನೇ ಕಂತಿನಲ್ಲಿ ಪ್ರತಿ ಮೆ.ಟನ್ ಕಬ್ಬಿಗೆ ಸರ್ಕಾರದಿಂದ ರೂ.50/- ಮತ್ತು ಕಾರ್ಖಾನೆಯಿಂದ ರೂ.50/- ರಂತೆ ಒಟ್ಟು ರೂ.100/-ಗಳನ್ನು ಸೇರಿಸಿ ಈ ಕೆಳಗಿನಂತೆ ಕಬ್ಬಿನ ಬೆಲೆಯನ್ನು ನಿಗದಿಪಡಿಸಲಾಗಿರುತ್ತದೆ. |

| ಇಳುವರಿ | ಎಫ್.ಆರ್.ಪಿ (ಪ್ರತಿ ಮೆ.ಟನ್) (ಕಬ್ಬು ಕಟಾವು ಮತ್ತು ಸಾಗಾಣಿಕೆ ವೆಚ್ಚವನ್ನು ಒಳಗೊಂಡಂತೆ) (ರೂ.ಗಳಲ್ಲಿ) | ಸಕ್ಕರೆ ಕಾರ್ಖಾನೆಗಳು ಮೊದಲಿನ ಕಂತಿನಲ್ಲಿ ರೈತರಿಗೆ ನೀಡಲು ಒಪ್ಪಿರುವ ಮೊತ್ತ ರೂ.ಗಳಲ್ಲಿ (ಪ್ರತಿ ಮೆ.ಟನ್ ಗೆ) (ಕಬ್ಬು ಕಟಾವು ಮತ್ತು ಸಾಗಾಣಿಕೆ ವೆಚ್ಚವನ್ನು ಹೊರತುಪಡಿಸಿ ) | ಎರಡನೇ ಕಂತಿನಲ್ಲಿ ಪಾವತಿಸಬೇಕಾದ ಮೊತ್ತ (ರೂ.ಗಳಲ್ಲಿ) | | | ಒಟ್ಟು ಮೊತ್ತ (ಕಬ್ಬು ಕಟಾವು ಮತ್ತು ಸಾಗಾಣಿಕೆ ವೆಚ್ಚವನ್ನು ಹೊರತುಪಡಿಸಿ) (ರೂ.ಗಳಲ್ಲಿ) |
|---|---|---|---|---|---|---|
| | | | ಸಕ್ಕರೆ ಕಾರ್ಖಾನೆಗಳು | ರಾಜ್ಯ ಸರ್ಕಾರ | ಒಟ್ಟು | |
| 1 | 2 | 3 | 4 | 5 | 6 | 7 (3+6) |
| 9.5% ಅಥವಾ ಕಡಿಮೆ | 3290.5 | ಕೇಂದ್ರ ಸರ್ಕಾರದ ಎಫ್.ಆರ್.ಪಿ ದರದನ್ವಯ ರೈತರಿಗೆ ನೀಡಲು ಒಪ್ಪಿರುವ ಮೊತ್ತ | 50 | 50 | 100 | ಕಾಲಂ 3 ರಲ್ಲಿನ ಮೊತ್ತಕ್ಕೆ ಎರಡನೇ ಕಂತಿನ ರೂ.100.00 ಗಳನ್ನು ಸೇರಿಸಿ ರೈತರಿಗೆ ನೀಡಬೇಕಾದ ಮೊತ್ತ |
| 10.25% | 3550 | 3100 | 50 | 50 | 100 | 3200.00 |
| 11.25% | 3896 | 3200 | 50 | 50 | 100 | 3300.00 |

| | | |
|---|---|---|
| ಆ) | ಈ ಸಂದರ್ಭದಲ್ಲಿ ಸಕ್ಕರೆ ಕಾರ್ಖಾನೆಯ ಮಾಲೀಕರು ಸರ್ಕಾರ ನಿಗದಿ ಪಡಿಸಿದ ಬೆಲೆ ನೀಡಲು ಕಷ್ಟವಾಗುತ್ತದೆ ಹಾಗೂ ಈಗಾಗಲೇ ಸಕ್ಕರೆ ಉದ್ಯಮಿಗಳು ಹಾನಿಯನ್ನು ಅನುಭವಿಸುತ್ತಿದೆಯೆಂದು ಸರ್ಕಾರದ ಗಮನಕ್ಕೆ ತಂದಿರುವುದು ನಿಜವೇ; | ಹೌದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. |
| ಇ) | ಆ ಸಂದರ್ಭದಲ್ಲಿ ರೈತರಿಗೆ ಮತ್ತು ಸಕ್ಕರೆ ಕಾರ್ಖಾನೆಯ ಮಾಲೀಕರಿಗೆ ಸರ್ಕಾರದಿಂದ ಕೆಲವೊಂದು ಸಹಾಯಧನ ರೂಪದಲ್ಲಿ ಅನುಕೂಲತೆಯನ್ನು ಕಲ್ಪಿಸಲು ಭರವಸೆಗಳನ್ನು ನೀಡಲಾಗಿದ್ದು, ಈಗ ಅದು ಪೂರ್ತಿಯಾಗಿದೆಯೆ; (ತಿಳಿಸುವುದು) | ಸರ್ಕಾರದ ಆದೇಶ ಸಂಖ್ಯೆ:ಸಿಐ 324 ಎಸ್‌ಜಿಎಫ್ 2025 ದಿನಾಂಕ: 08.11.2025 ರಲ್ಲಿ 2025-26ನೇ ಹಂಗಾಮಿನಲ್ಲಿ ರಾಜ್ಯದ ಸಕ್ಕರೆ ಕಾರ್ಖಾನೆಗಳಿಗೆ ಕಬ್ಬು ಸರಬರಾಜು ಮಾಡಿದ ರೈತರಿಗೆ ಸಂಬಂಧಿಸಿದ ಸಕ್ಕರೆ ಕಾರ್ಖಾನೆಗಳು ಪಾವತಿಸಬೇಕಾದ ಕನಿಷ್ಟ ಹೆಚ್ಚುವರಿ ಕಬ್ಬು ಬೆಲೆಯನ್ನು ನಿಗಧಿಪಡಿಸಿ ಮಾರ್ಗಸೂಚಿಗಳನ್ನು ಹೊರಡಿಸಲಾಗಿದ್ದು, ರಾಜ್ಯದ ಸಕ್ಕರೆ ಕಾರ್ಖಾನೆಗಳಿಗೆ ಕಬ್ಬು ಸರಬರಾಜು ಮಾಡಿದ ರೈತರಿಗೆ ಒಂದು ಬಾರಿಯ ಕ್ರಮವಾಗಿ ಪ್ರತಿ ಮೆ.ಟನ್ ಗೆ ರೂ.50/- ಗಳ ಆರ್ಥಿಕ ನೆರವನ್ನು ರಾಜ್ಯ ಸರ್ಕಾರದಿಂದ ಒದಗಿಸಲಾಗುವುದೆಂದು ಮತ್ತು ಸಕ್ಕರೆ ಕಾರ್ಖಾನೆಗಳು ಎರಡನೇ ಕಂತಿನ ಮೊತ್ತ ರೂ.50/- ಗಳನ್ನು ಸೇರಿಸಿ ಹೀಗೆ ಒಟ್ಟು ರೂ. 100/- ಗಳನ್ನು ಪ್ರತಿ ಮೆ.ಟನ್ ಒಂದಕ್ಕೆ ಪಾವತಿಸಲು ಆದೇಶ ಹೊರಡಿಸಲಾಗಿರುತ್ತದೆ.<br><br>ಸರ್ಕಾರದ ಆದೇಶ ಸಂಖ್ಯೆ:ಸಿಐ 324 ಎಸ್‌ಜಿಎಫ್ 2025, ದಿನಾಂಕ: 24.02.2026 ರಲ್ಲಿ 2025-26ನೇ ಹಂಗಾಮಿನಲ್ಲಿ ಕರ್ನಾಟಕ ರಾಜ್ಯದ ಸಕ್ಕರೆ ಕಾರ್ಖಾನೆಗಳಿಗೆ ಕಬ್ಬು ಸರಬರಾಜು ಮಾಡಿದ ಕರ್ನಾಟಕ ರಾಜ್ಯದ, ರೈತರಿಗೆ ಸರ್ಕಾರ ದಿನಾಂಕ:08.11.2025 ರಂದು ಘೋಷಿಸಿರುವಂತೆ ಪ್ರತಿ ಒಂದು ಮೆ.ಟನ್ ಕಬ್ಬಿಗೆ ರೂ 50.00 ರಂತೆ ಆರ್ಥಿಕ ನೆರವನ್ನು ಪಾವತಿಸುವುದಕ್ಕಾಗಿ 2025-26ನೇ ಸಾಲಿನ ಲೆಕ್ಕ ಶೀರ್ಷಿಕೆ: 2852-08-201-0-07-100 "Special Incentives to Sugarcane Growers Finance Assistance / Relief" ರಡಿ ರೂ. 300.00 ಕೋಟಿಗಳ ಅನುದಾನವನ್ನು ಬಿಡುಗಡೆಗೊಳಿಸಲಾಗಿರುತ್ತದೆ.<br><br>ಸರ್ಕಾರದ ಆದೇಶದಂತೆ ಬಿಡುಗಡೆಗೊಂಡಿರುವ ಅನುದಾನವನ್ನು ಸಂಬಂಧಪಟ್ಟ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡುವ ಸಂಬಂಧ ದಿನಾಂಕ:15.02.2026 ರಲ್ಲಿ ಇದ್ದಂತೆ ಕಾರ್ಖಾನೆಗಳು ಅರೆದಿರುವ ಕಬ್ಬಿನ ಪ್ರಮಾಣಕ್ಕೆ ಅನುಗುಣವಾಗಿ ರೂ.260,23,58,050.00 (ಎರಡು ನೂರ ಅರವತ್ತು ಕೋಟಿ ಇಪ್ಪತ್ತೂರು ಲಕ್ಷ ಐವತ್ತೆಂಟು ಸಾವಿರ ಐವತ್ತು ರೂಗಳು ಮಾತ್ರ) ಗಳನ್ನು ಸಂಬಂಧಪಟ್ಟ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ಕೆಲವೊಂದು ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟು ದಿನಾಂಕ:25.02.2026 ರಂದು ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ಆದೇಶವನ್ನು ಹೊರಡಿಸಿರುತ್ತಾರೆ. ಪ್ರತಿಯನ್ನು **ಅನುಬಂಧ-1** ರಲ್ಲಿ ಒದಗಿಸಿದೆ. |

...3

| | | |
|---|---|---|
| | | ವಿವಿಧ ಜಿಲ್ಲೆಗಳ ಜಿಲ್ಲಾಧಿಕಾರಿಗಳು ಮತ್ತು ಉಪ ನಿರ್ದೇಶಕರು, ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ ಇವರು ಸರ್ಕಾರದ ದಿನಾಂಕ: 08.11.2025ರ ಆದೇಶದಂತೆ ಸರ್ಕಾರದಿಂದ ಪಾವತಿಸಬೇಕಾಗಿರುವ ರೂ.50.00 ಮತ್ತು ಕಾರ್ಖಾನೆಗಳಿಂದ ಪಾವತಿಸಬೇಕಾಗಿರುವ ರೂ.50.00 ಸೇರಿದಂತೆ ಒಟ್ಟಿಗೆ ಪ್ರತಿ ಮೆ.ಟನ್ ಕಬ್ಬಿಗೆ ರೂ.100.00 ಗಳನ್ನು ಸೇರಿಸಿ ಕಾರ್ಖಾನೆಗಳ ಮೂಲಕ ರೈತರಿಗೆ ಪಾವತಿಸುವುದು ಆಡಳಿತಾತ್ಮಕವಾಗಿ ಸೂಕ್ತ ಕ್ರಮವಾಗುತ್ತದೆ ಎಂದು ಮೌಖಿಕವಾಗಿ ಕೋರಿಕೆ ಸಲ್ಲಿಸಿರುತ್ತಾರೆ.<br><br>ಆದ್ದರಿಂದ, ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರ ದಿನಾಂಕ:25.02.2026 ರ ಆದೇಶದಲ್ಲಿ ವಿಧಿಸಲಾಗಿದ್ದ ಷರತ್ತು ಮತ್ತು ನಿಬಂಧನೆಗಳನ್ನು ತಿದ್ದುಪಡಿಗೊಳಿಸಿ, ಸಂಬಂಧಪಟ್ಟ ಜಿಲ್ಲೆಗಳ ಜಿಲ್ಲಾಧಿಕಾರಿಗಳು ತಮ್ಮ ಕಾರ್ಯವ್ಯಾಪ್ತಿಯಲ್ಲಿ ಬರುವ ಸಕ್ಕರೆ ಕಾರ್ಖಾನೆಗಳಿಗೆ ದಿನಾಂಕ: 15.02.2026ಕ್ಕೆ ಇರುವಂತೆ ಅವುಗಳು ಅರೆದಿರುವ ಕಬ್ಬಿನ ಪ್ರಮಾಣಕ್ಕೆ ಅನುಗುಣವಾಗಿ ಪ್ರತಿ ಮೆ.ಟನ್ ಕಬ್ಬಿಗೆ ಸರ್ಕಾರದ ಮೊತ್ತ ರೂ.50.00 ರಂತೆ ನೇರವಾಗಿ ಕಾರ್ಖಾನೆಗಳಿಗೆ ಬಿಡುಗಡೆ ಮಾಡತಕ್ಕದ್ದು. ಪ್ರತಿ ಮೆ.ಟನ್ ಕಬ್ಬಿಗೆ ಸರ್ಕಾರದಿಂದ ಬಿಡುಗಡೆಗೊಂಡಿರುವ ರೂ.50.00 ಹಾಗೂ ಕಾರ್ಖಾನೆಗಳಿಂದ ಪಾವತಿಸಬೇಕಾಗಿರುವ ರೂ.50.00 ಅನ್ನು ಒಟ್ಟಿಗೆ ಸೇರಿಸಿ ಪ್ರತಿ ಮೆ.ಟನ್ ಕಬ್ಬಿಗೆ ರೂ.100.00 ಗಳನ್ನು ಕಾರ್ಖಾನೆಗಳಿಂದ ರೈತರಿಗೆ ಪಾವತಿಸಲು ಜಿಲ್ಲಾಧಿಕಾರಿಗಳು ಕ್ರಮವಹಿಸತಕ್ಕದ್ದು ಎಂದು ತಿದ್ದುಪಡಿ ಆದೇಶವನ್ನು ದಿನಾಂಕ:03.03.2026 ರಂದು ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ಹೊರಡಿಸಿರುತ್ತಾರೆ. ಪ್ರತಿಯನ್ನು **ಅನುಬಂಧ-2** ರಲ್ಲಿ ಒದಗಿಸಿದೆ.<br><br>ಅದರಂತೆ, ಸಂಬಂಧಪಟ್ಟ ಜಿಲ್ಲೆಗಳ ಜಿಲ್ಲಾಧಿಕಾರಿಗಳು, ಕಾರ್ಖಾನೆಗಳಿಗೆ ಈಗಾಗಲೇ ಸರ್ಕಾರದ ಆರ್ಥಿಕ ನೆರವನ್ನು ಬಿಡುಗಡೆಗೊಳಿಸಿದ್ದು, ಕೆಲವೊಂದು ಸಕ್ಕರೆ ಕಾರ್ಖಾನೆಗಳು ತಮ್ಮ ಪಾಲಿನ ರೂ.50/-ಗಳನ್ನು ಸೇರಿಸಿ ಈಗಾಗಲೇ ರೈತರ ಖಾತೆಗಳಿಗೆ ಜಮಾ ಮಾಡಿರುತ್ತಾರೆ. ಇನ್ನು ಕೆಲವೊಂದು ಕಾರ್ಖಾನೆಗಳು ಪಾವತಿ ಮಾಡಬೇಕಾಗಿರುತ್ತದೆ. ಈ ಸಂಬಂಧ ಜಿಲ್ಲಾಧಿಕಾರಿಗಳು ರೈತರಿಗೆ ಪೂರ್ಣವಾಗಿ ಕಬ್ಬು ಬಿಲ್ಲು ಪಾವತಿಸಲು ಕ್ರಮ ಕೈಗೊಳ್ಳುತ್ತಿದ್ದಾರೆ. |
| ಈ) | ರಾಜ್ಯ ಸರ್ಕಾರ ಸಕ್ಕರೆ ಕಾರ್ಖಾನೆಗಳಿಂದ ವಿದ್ಯುತ್ ಖರೀದಿ ಒಪ್ಪಂದ ಮಾಡಿಕೊಂಡು ಕಾರ್ಖಾನೆಗಳಿಗೆ ಅನುಕೂಲ ಒದಗಿಸುವುದಾಗಿ ಹೇಳಿದ್ದು, ಅದು ಕಾರ್ಯರೂಪಕ್ಕೆ ಬಂದಿದೆಯೇ; ಇಲ್ಲವಾದಲ್ಲಿ ಕಬ್ಬು ಬೆಳೆಗಾರರಿಗೆ ಮತ್ತು ಕಾರ್ಖಾನೆಗಳಿಗೆ ಹಾನಿಯನ್ನು ಭರಿಸುವುದು ಹೇಗೆ; | **ಇಂಧನ ಇಲಾಖೆಯ ಉತ್ತರ:**<br>ಮಾನ್ಯ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ದಿನಾಂಕ:07.11.2025ರಂದು ಜರುಗಿದ ಸಭೆಯಲ್ಲಿ ಕೈಗೊಂಡ ತೀರ್ಮಾನದನ್ವಯ ಸಕ್ಕರೆ ಕಾರ್ಖಾನೆಗಳು ಉತ್ಪಾದಿಸುವ ವಿದ್ಯುತ್ತನ್ನು 10 ವರ್ಷಗಳ ಅವಧಿಗೆ ಖರೀದಿಸಲು ಒಪ್ಪಂದ ಮಾಡಿಕೊಳ್ಳುವ ಕುರಿತಂತೆ ಪಿಸಿಕೆಎಲ್‌ನ ಅಭಿಪ್ರಾಯ ಕೋರಲಾಗಿದ್ದು, ಪ್ರಸ್ತಾವನೆಯು ಪರಿಶೀಲನೆಯಲ್ಲಿರುತ್ತದೆ. |

...4

| | | |
|---|---|---|
| ಉ) | ಸರ್ಕಾರದಿಂದ ಕಾರ್ಖಾನೆಗಳಿಗೆ ನದಿಯಿಂದ ನೀರನ್ನು ಹೆಚ್ಚಿಸದೆ ಅದನ್ನೆ ಮುಂದುವರೆಸುವುದಾಗಿ ಹೇಳಿದ್ದು, ಅದು ಈವರೆಗೂ ಕಾರ್ಯ ರೂಪಕ್ಕೆ ಬಂದಿಲ್ಲದಿರುವುದಕ್ಕೆ ಕಾರಣಗಳೇನು; (ಮಾಹಿತಿ ನೀಡುವುದು) | **ಜಲಸಂಪನ್ಮೂಲ ಇಲಾಖೆಯ ಉತ್ತರ:**<br>ಜಲಸಂಪನ್ಮೂಲ ಇಲಾಖೆಯಡಿ ಈ ಮೊದಲು ಹೊರಡಿಸಲಾದ ಅಧಿಸೂಚನೆ ಸಂಖ್ಯೆ:WRD 16 NPC 99(P), ದಿನಾಂಕ:09.10.2002 ರಲ್ಲಿ ಕೈಗಾರಿಕಾ ಬಳಕೆಗೆ ಉಪಯೋಗಿಸುವ ನೀರಿನ ದರಕ್ಕೆ ಸಂಬಂಧಿಸಿದಂತೆ;<br>ಕಾಲುವೆಗಳು, ಕೆರೆಗಳು, ಜಲಾಶಯ ಇತ್ಯಾದಿಗಳಿಂದ ನೀರನ್ನು ಒದಗಿಸಿದ್ದರೆ: ರೂ.3200/Mcft ಹಾಗೂ ನೈಸರ್ಗಿಕ ಜಲಮಾರ್ಗಗಳು, ನದಿ, ಹಳ್ಳಗಳಿಂದ ನೀರನ್ನು ಒದಗಿಸಿದ್ದರೆ: ರೂ:1800/Mcft ನಿಗಧಿಪಡಿಸಲಾಗಿರುತ್ತದೆ. ಪ್ರತಿಯನ್ನು **ಅನುಬಂಧ-3** ರಲ್ಲಿ ಒದಗಿಸಿದೆ.<br>ಪ್ರಸ್ತುತ, ಸಚಿವ ಸಂಪುಟದ ಅನುಮೋದನೆಯನ್ವಯ ಸದರಿ ಅಧಿಸೂಚನೆಯನ್ನು ತಿದ್ದುಪಡಿ ಮಾಡಿ ಅಧಿಸೂಚನೆ ಸಂಖ್ಯೆ: WRD 309 KBN 2023, ದಿನಾಂಕ:12.02.2024 ರಂದು ಈ ಕೆಳಕಂಡಂತೆ ನೀರಿನ ದರವನ್ನು ಪರಿಷ್ಕರಿಸಿ,<br>ಕಾಲುವೆಗಳು, ಕೆರೆಗಳು, ಜಲಾಶಯ ಇತ್ಯಾದಿಗಳಿಂದ ನೀರನ್ನು ಒದಗಿಸಿದ್ದರೆ: ರೂ.3.00 ಲಕ್ಷ/Mcft ಹಾಗೂ ನೈಸರ್ಗಿಕ ಜಲಮಾರ್ಗಗಳು, ನದಿ, ಹಳ್ಳಗಳಿಂದ ನೀರನ್ನು ಒದಗಿಸಿದ್ದರೆ; ರೂ.1.50 ಲಕ್ಷ/Mcft ನಿಗಧಿಪಡಿಸಿ ಹೊರಡಿಸಲಾಗಿರುತ್ತದೆ. ಪ್ರತಿಯನ್ನು **ಅನುಬಂಧ-4** ರಲ್ಲಿ ಒದಗಿಸಿದೆ. |
| ಊ) | ವಿದ್ಯುತ್ ಸರಬರಾಜು ಮೇಲಿನ ಹೆಚ್ಚಿಸಿದ ಕರಗಳನ್ನು ಕೈಬಿಡುವುದಾಗಿ ಹೇಳಿದ್ದು, ಸರ್ಕಾರದ ಗಮನಕ್ಕೆ ಬಂದಿದೆಯೇ; ಕೈಗೊಂಡಿರುವ ಕ್ರಮಗಳೇನು; | **ಇಂಧನ ಇಲಾಖೆಯ ಉತ್ತರ:**<br>ಸಹ ವಿದ್ಯುತ್ ಘಟಕಗಳ ಮೇಲೆ ವಿಧಿಸಲಾಗುತ್ತಿರುವ STU Open Access Charges ನಿಂದ ವಿನಾಯಿತಿ ನೀಡುವ ಪ್ರಸ್ತಾವನೆಯ ಕುರಿತಂತೆ ಕೆಪಿಟಿಸಿಎಲ್‌ನ ಅಭಿಪ್ರಾಯ ಕೋರಲಾಗಿದ್ದು, ಪ್ರಸ್ತಾವನೆಯು ಪರಿಶೀಲನೆಯಲ್ಲಿರುತ್ತದೆ.<br>ಸಹ-ವಿದ್ಯುತ್ ಘಟಕಗಳ ಮೇಲೆ ವಿಧಿಸಲಾಗುತ್ತಿರುವ Captive Generation Tax ನಿಂದ ವಿನಾಯಿತಿ ನೀಡುವ ಪ್ರಸ್ತಾವನೆಯ ಕುರಿತಂತೆ ಮುಖ್ಯ ವಿದ್ಯುತ್ ಪರಿವೀಕ್ಷಣಾಲಯದ ಅಭಿಪ್ರಾಯ ಕೋರಲಾಗಿದ್ದು, ಪ್ರಸ್ತಾವನೆಯು ಪರಿಶೀಲನೆಯಲ್ಲಿರುತ್ತದೆ. |
| ಋ) | ಕೇಂದ್ರ ಸರ್ಕಾರದ ಮೇಲೆ ಒತ್ತಡ ತಂದು ಕಬ್ಬಿನ ಬೆಲೆ ಎಮ್ ಎಸ್ ಪಿ ದರವನ್ನು ಈಗಿರುವ 31/- ರೂ. ದಿಂದ 42/- ರೂ. ಗೆ ಹೆಚ್ಚಿಸುವ ಬಗ್ಗೆ ಸರ್ಕಾರ ಏನು ಕ್ರಮ ಜರುಗಿಸಿದೆ? (ಮಾಹಿತಿ ನೀಡುವುದು) | ಕಬ್ಬು ಬೆಳೆಗಾರ ರೈತರು ಮತ್ತು ಸಕ್ಕರೆ ಕಾರ್ಖಾನೆಗಳ ಬೇಡಿಕೆಗಳ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ದಿನಾಂಕ:06.11.2025 ಮತ್ತು 08.11.2025 ರಂದು ಸನ್ಮಾನ್ಯ ಪ್ರಧಾನ ಮಂತ್ರಿಗಳಿಗೆ ಪತ್ರ ಬರೆದಿರುತ್ತಾರೆ. ಅಲ್ಲದೇ ಮಾನ್ಯ ಮುಖ್ಯಮಂತ್ರಿಗಳು ಖುದ್ದಾಗಿ ಸನ್ಮಾನ್ಯ ಪ್ರಧಾನ ಮಂತ್ರಿಗಳನ್ನು ಭೇಟಿಯಾಗಿ ಮನವಿ ಪತ್ರವನ್ನು ನೀಡಿ ವಿಷಯದ ಬಗ್ಗೆ ಚರ್ಚೆ ಮಾಡಿರುತ್ತಾರೆ.<br>ಮಾನ್ಯ ಮುಖ್ಯಮಂತ್ರಿಯವರ ಮನವಿ ನೀಡಿದ ನಂತರ ಕೇಂದ್ರ ಸರ್ಕಾರವು 2025-26ನೇ ಹಂಗಾಮಿನಲ್ಲಿ ದೇಶದ ಸಕ್ಕರೆ ಕಾರ್ಖಾನೆಗಳು 15.00 ಲಕ್ಷ ಮೆ.ಟನ್ ಸಕ್ಕರೆ ರಫ್ತು ಮಾಡಲು ಅನುಮತಿ ನೀಡಿರುತ್ತದೆ. ಇದರಲ್ಲಿ ರಾಜ್ಯದ ಸಕ್ಕರೆ ಕಾರ್ಖಾನೆಗಳಿಗೆ 2.47 ಲಕ್ಷ ಮೆ.ಟನ್ ಸಕ್ಕರೆ ರಫ್ತು ಮಾಡಲು ಅವಕಾಶ ಕಲ್ಪಿಸಲಾಗಿದೆ.<br>ಇದರ ಜೊತೆಗೆ ಕಬ್ಬು ಬೆಳೆಗಾರರಿಗೆ ನ್ಯಾಯಯುತ ಮತ್ತು ಲಾಭದಾಯಕ ಬೆಲೆ(FRP) ಹೆಚ್ಚಿಸುವುದು, ಕಬ್ಬಿಗೆ ಬೆಲೆ ನಿಗದಿಗೊಳಿಸುವಾಗ ಸರಾಸರಿ ಮೂಲ ಸಕ್ಕರೆ ಇಳುವರಿಯನ್ನು ಶೇ.9.5 ಗಳೆಂದು ಪರಿಗಣಿಸುವುದು, FRP ದರವನ್ನು Ex-Gate ಬದಲಾಗಿ Ex-Field ದರವೆಂದು ಪರಿಗಣಿಸುವುದು ಸೇರಿದಂತೆ ಇನ್ನಿತರ ಬೇಡಿಕೆಗಳ ಬಗ್ಗೆ ಹಾಗೂ ಸಕ್ಕರೆ ಕಾರ್ಖಾನೆಗಳ ಪ್ರಮುಖ ಬೇಡಿಕೆಗಳಾದ ಸಕ್ಕರೆಯ ಕನಿಷ್ಠ ಮಾರಾಟ ಬೆಲೆ(MSP) ಹೆಚ್ಚಿಸುವುದು, ಕಬ್ಬಿನಿಂದ - |

...5

| | | |
|---|---|---|
| | | ಉತ್ಪಾದಿಸುವ ಎಥನಾಲ್ ದರ ಪರಿಷ್ಕರಣೆ ಮತ್ತು ರಾಜ್ಯದ ಸಕ್ಕರೆ ಕಾರ್ಖಾನೆಗಳಿಗೆ ಹಂಚಿಕೆ ಮಾಡುವ ವಾರ್ಷಿಕ ಎಥನಾಲ್ ಪ್ರಮಾಣವನ್ನು ಹೆಚ್ಚಿಸುವುದು ಇತ್ಯಾದಿ ಬೇಡಿಕೆಗಳ ಬಗ್ಗೆ ಕೇಂದ್ರ ಗ್ರಾಹಕ ವ್ಯವಹಾರಗಳು, ಆಹಾರ ಮತ್ತು ಸಾರ್ವಜನಿಕ ವಿತರಣೆ, ಹೊಸ ಮತ್ತು ನವೀಕರಿಸಬಹುದಾದ ಇಂಧನ ಸಚಿವರಿಗೆ ದಿನಾಂಕ:06.11.2025 ಮತ್ತು 08.11.2025 ಮಾನ್ಯ ಮುಖ್ಯಮಂತ್ರಿಯವರು ಪತ್ರ ಬರೆದಿರುತ್ತಾರೆ. |

**ಸಂಖ್ಯೆ:** ಸಿಐ 118 ಎಸ್‌ಜಿಎಫ್ 2026

**(ಶಿವಾನಂದ ಎಸ್ ಪಾಟೀಲ)**
ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ
ಹಾಗೂ ಕೃಷಿ ಮಾರುಕಟ್ಟೆ ಸಚಿವರು

ಅನುಬಂಧ - 1

**ಆಯುಕ್ತರು**
ಕಬ್ಬು ಅಭಿವೃದ್ಧಿ ಹಾಗೂ
ಸಕ್ಕರೆ ನಿರ್ದೇಶಕರು

**ಕರ್ನಾಟಕ ಸರ್ಕಾರ**

5ನೇ ಮಹಡಿ, ಎಫ್ ಬ್ಲಾಕ್, ಸಿಬಿಎಬಿ ಸಂಕೀರ್ಣ, ಕೆಹೆಚ್‌ಬಿ ಕಟ್ಟಡ,
ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು- 560 009
ದೂರವಾಣಿ: 080-22133390/22133392 ಫ್ಯಾಕ್ಸ್: 08022133391
ಇಮೇಲ್: canecommissioner@gmail.com
ವೆಬ್ ಸೈಟ್: www.canecommissionarate.karnataka.gov.in

ವಿಷಯ :- 2025-26ನೇ ಹಂಗಾಮಿನಲ್ಲಿ ಸಕ್ಕರೆ ಕಾರ್ಖಾನೆಗಳಿಗೆ ಕಬ್ಬು ಸರಬರಾಜು ಮಾಡಿದ ರೈತರಿಗೆ ನಿಗದಿಪಡಿಸಿರುವ ಹೆಚ್ಚುವರಿ ಕಬ್ಬಿನ ಬೆಲೆಯನ್ನು ಬಿಡುಗಡೆ ಮಾಡುವ ಕುರಿತು.

ಉಲ್ಲೇಖ:
1. ಸರ್ಕಾರದ ಆದೇಶ ಸಂಖ್ಯೆ: ಸಿಐ 324 ಎಸ್.ಜಿ.ಎಫ್ 2025, ದಿನಾಂಕ: 08.11.2025
2. ಈ ಕಛೇರಿಯ ಸಮ ಸಂಖ್ಯೆ ಪತ್ರ ದಿನಾಂಕ: 19.02.2026
3. ಸರ್ಕಾರದ ಆದೇಶ ಸಂಖ್ಯೆ: ಸಿಐ 324 ಎಸ್‌ಜಿಎಫ್ 2025 (ಭಾಗ-1) ದಿನಾಂಕ: 24.02.2026

***

**ಪ್ರಸ್ತಾವನೆ :**

2025-26ನೇ ಹಂಗಾಮಿನಲ್ಲಿ ರಾಜ್ಯದ ಸಕ್ಕರೆ ಕಾರ್ಖಾನೆಗಳಿಗೆ ಕಬ್ಬು ಸರಬರಾಜು ಮಾಡಿದ ರೈತರಿಗೆ ಸಂಬಂಧಿಸಿದ ಸಕ್ಕರೆ ಕಾರ್ಖಾನೆಗಳು ಪಾವತಿಸಬೇಕಾದ ಕನಿಷ್ಠ ಹೆಚ್ಚುವರಿ ಕಬ್ಬು ಬೆಲೆಯನ್ನು ನಿಗಧಿಪಡಿಸಿ ಮಾರ್ಗಸೂಚಿಗಳನ್ನು ಹೊರಡಿಸಲಾಗಿದ್ದು ರಾಜ್ಯದ ಸಕ್ಕರೆ ಕಾರ್ಖಾನೆಗಳಿಗೆ ಕಬ್ಬು ಸರಬರಾಜು ಮಾಡಿದ ರೈತರಿಗೆ ಒಂದು ಬಾರಿಯ ಕ್ರಮವಾಗಿ ಪ್ರತಿ ಮೆ.ಟನ್ ಗೆ ರೂ.50/- ಗಳ ಆರ್ಥಿಕ ನೆರವನ್ನು ರಾಜ್ಯ ಸರ್ಕಾರದಿಂದ ಒದಗಿಸಲಾಗುವುದೆಂದು ಉಲ್ಲೇಖ (1)ರಂತೆ ಆದೇಶಿಸಲಾಗಿರುತ್ತದೆ.

2025-26 ನೇ ಹಂಗಾಮಿನಲ್ಲಿ ರಾಜ್ಯದ ಸಕ್ಕರೆ ಕಾರ್ಖಾನೆಗಳಿಗೆ ಕಬ್ಬು ಸರಬರಾಜು ಮಾಡಿದ ರೈತರಿಗೆ ಸಂಬಂಧಿಸಿದ ಸಕ್ಕರೆ ಕಾರ್ಖಾನೆಗಳು ಪಾವತಿಸಬೇಕಾದ ಕನಿಷ್ಠ ಹೆಚ್ಚುವರಿ ಕಬ್ಬು ಬೆಲೆಯನ್ನು ನಿಗಧಿಪಡಿಸಲು ಹಾಗೂ ರಾಜ್ಯದ ಸಕ್ಕರೆ ಕಾರ್ಖಾನೆಗಳಿಗೆ ಕಬ್ಬು ಸರಬರಾಜು ಮಾಡಿದ ರೈತರಿಗೆ ರಾಜ್ಯ ಸರ್ಕಾರದಿಂದ ಆರ್ಥಿಕ ನೆರವನ್ನು ಒಂದು ಬಾರಿ ನೀಡಲು 2025-26 ನೇ ಸಾಲಿನ ಲೆಕ್ಕಶೀರ್ಷಿಕೆ: 2852-08-201-0-07-100 "Special Incentive to Sugarcane Growers Finance Assistance/Relief " ರಡಿ ರೂ.300.00 ಕೋಟಿಗಳ ಅನುದಾನವನ್ನು ಪೂರಕ ಅಂದಾಜು-2ನೇ ಕಂತಿನಲ್ಲಿ ಹೆಚ್ಚುವರಿಯಾಗಿ ಒದಗಿಸಲಾಗಿದೆ.

ಸರ್ಕಾರದ ಆದೇಶದಂತೆ ಕಬ್ಬು ಸರಬರಾಜು ಮಾಡಿದ ರೈತರಿಗೆ ಮೊದಲನೇ ಕಂತಿನಲ್ಲಿ ಕೇಂದ್ರ ಸರ್ಕಾರದ ಎಫ್ ಆರ್ ಪಿ ದರದಂತೆ ಹಾಗೂ ಕಾರ್ಖಾನೆಗಳು ಮತ್ತು ರೈತರು ಮಾನ್ಯ ಮುಖ್ಯಮಂತ್ರಿಗಳ

ಅಧ್ಯಕ್ಷತೆಯಲ್ಲಿ ಜರುಗಿದ ಸಭೆಯಲ್ಲಿ ಪರಸ್ಪರ ಒಪ್ಪಿದ ಮೊತ್ತದಂತೆ ಪಾವತಿಸಲು, ತದನಂತರ ಎರಡನೇ ಕಂತಿನಲ್ಲಿ ಪ್ರತಿ ಮೆ.ಟನ್ ಕಬ್ಬಿಗೆ ಸರ್ಕಾರದಿಂದ ರೂ.50/- ಮತ್ತು ಕಾರ್ಖಾನೆಯಿಂದ ರೂ.50/- ರಂತೆ ಒಟ್ಟು ರೂ.100/- ಗಳನ್ನು ಸೇರಿಸಿ ರೈತರಿಗೆ ನೀಡಬೇಕಾಗಿರುತ್ತದೆ. ಪ್ರಸ್ತುತ 2025-26ನೇ ಹಂಗಾಮು ಚಾಲ್ತಿಯಲ್ಲಿರುತ್ತದೆ. ದಿನಾಂಕ:15.02.2026 ರಲ್ಲಿದ್ದಂತೆ ರಾಜ್ಯದ ಸಕ್ಕರೆ ಕಾರ್ಖಾನೆಗಳು ಅರೆದಿರುವ ಕಬ್ಬಿನ ಪ್ರಮಾಣ ಮತ್ತು ಅದಕ್ಕೆ ಅನುಗುಣವಾಗಿ ಪ್ರತಿ ಮೆ.ಟನ್ ಗೆ ರೂ.50/- ರಂತೆ ಸರ್ಕಾರದಿಂದ ಪಾವತಿಸಬೇಕಾದ ಮೊತ್ತದ ವಿವರ ಈ ಕೆಳಕಂಡಂತಿರುತ್ತದೆ.

**(ದಿನಾಂಕ: 15.02.2026 ಕ್ಕೆ ಇದ್ದಂತೆ)**

| ಕ್ರ.ಸಂ | ವಿವರಗಳು | ಅಂಕಿ ಅಂಶಗಳು |
|---|---|---|
| 01 | ಒಟ್ಟು ಕಾರ್ಖಾನೆಗಳ ಸಂಖ್ಯೆ | 81 |
| 02 | ಪ್ರಸ್ತುತ ಹಂಗಾಮು ಮುಕ್ತಾಯಗೊಳಿಸಿರುವ ಕಾರ್ಖಾನೆಗಳ ಸಂಖ್ಯೆ | 29 |
| 03 | ನುರಿಸಿರುವ ಕಬ್ಬಿನ ಪ್ರಮಾಣ (ಲಕ್ಷ ಮೆ.ಟನ್‌ಗಳಲ್ಲಿ) | 521 |
| 04 | ಕಳೆದ ಸಾಲಿನಲ್ಲಿ ನುರಿಸಿರುವ ಕಬ್ಬಿನ ಪ್ರಮಾಣ (ಲಕ್ಷ ಮೆ.ಟನ್ ಗಳಲ್ಲಿ) | 521 |
| 05 | ಕಳೆದ ಸಾಲಿಗೆ ಹೋಲಿಸಿದರೆ ನುರಿಸಿರುವ ಶೇಕಡವಾರು ಕಬ್ಬಿನ ಪ್ರಮಾಣ | 100% |
| 06 | 2025-26ನೇ ಹಂಗಾಮಿನಲ್ಲಿ ಕಾರ್ಖಾನೆಗಳು ನುರಿಸಬಹುದಾದ ಕಬ್ಬಿನ ಅಂದಾಜು ಪ್ರಮಾಣ (ಲಕ್ಷ ಮೆ.ಟನ್ ಗಳಲ್ಲಿ) | 600 |
| 07 | ಪ್ರಸಕ್ತ ಹಂಗಾಮು ಮುಕ್ತಾಯಗೊಳ್ಳಬಹುದಾದ ಅಂದಾಜು ದಿನಾಂಕ | ಮಾರ್ಚ್ ಮೊದಲನೇ/ ಎರಡನೇ ವಾರ |
| 08 | ಪ್ರಸಕ್ತ ಹಂಗಾಮಿಗೆ ಪ್ರತಿ ಮೆ.ಟನ್ ಕಬ್ಬಿಗೆ ರೂ.50/- ರಂತೆ ಸರ್ಕಾರದಿಂದ ಪಪಾವತಿಸಬೇಕಾದ ಮೊತ್ತ (ರೂ. ಕೋಟಿಗಳಲ್ಲಿ) | 300 |

ಪ್ರಸ್ತುತ ಆರ್ಥಿಕ ವರ್ಷವು ಮುಕ್ತಾಯದ ಹಂತದಲ್ಲಿರುವುದರಿಂದ ಈಗಾಗಲೇ ಪೂರಕ ಅಂದಾಜುಗಳಲ್ಲಿ ಒದಗಿಸಲಾಗಿರುವ ರೂ.300.00 ಕೋಟಿಗಳನ್ನು ಸಕಾಲದಲ್ಲಿ ಕಬ್ಬು ಸರಬರಾಜು ಮಾಡಿದ ರೈತರಿಗೆ ಬಿಡುಗಡೆ ಮಾಡಬೇಕಾಗಿರುತ್ತದೆ. ಇಲ್ಲವಾದಲ್ಲಿ ಸದರಿ ಅನುದಾನವು ವ್ಯಪಗತವಾಗುವ ಸಾಧ್ಯತೆ ಇರುತ್ತದೆ. ಈಗಾಗಲೇ ಶೇ.95% ರಷ್ಟು ಕಬ್ಬು ಅರೆಯುವ ಹಂಗಾಮು ಮುಕ್ತಾಯಗೊಂಡಿರುತ್ತದೆ. ಈ ಹಿನ್ನೆಲೆಯಲ್ಲಿ ಸರ್ಕಾರದಿಂದ ಕಲ್ಪಿಸಲಾಗಿರುವ ಅನುದಾನವನ್ನು

ಮಂಜೂರು ಮಾಡಿ ಬಿಡುಗಡೆ ಮಾಡಲು ಹಾಗೂ ಈ ಸಂಬಂಧ ಸರ್ಕಾರದ ಆದೇಶ ಹೊರಡಿಸಲು ಕೋರಿ ಉಲ್ಲೇಖ (2)ರ ಪತ್ರದಲ್ಲಿ ಪ್ರಸ್ತಾವನೆ ಸಲ್ಲಿಸಲಾಗಿತ್ತು.

ಅದರಂತೆ ಸರ್ಕಾರವು ಉಲ್ಲೇಖ (3)ರ ಆದೇಶದಲ್ಲಿ 2025-26ನೇ ಹಂಗಾಮಿನಲ್ಲಿ ಕರ್ನಾಟಕ ರಾಜ್ಯದ ಸಕ್ಕರೆ ಕಾರ್ಖಾನೆಗಳಿಗೆ ಕಬ್ಬು ಸರಬರಾಜು ಮಾಡಿದ ಕರ್ನಾಟಕ ರಾಜ್ಯದ, ರೈತರಿಗೆ ಸರ್ಕಾರದ ಆದೇಶ ಸಂಖ್ಯೆ: ಸಿಐ 324 ಎಸ್‌ಜಿಎಫ್ 2025, ದಿನಾಂಕ:08.11.2025 ಘೋಷಿಸಿರುವಂತೆ ಪ್ರತಿ ಒಂದು ಮಟನ್ ಕಬ್ಬಿಗೆ ರೂ 50.00 ರಂತೆ ಆರ್ಥಿಕ ನೆರವನ್ನು ಪಾವತಿಸುವುದಕ್ಕಾಗಿ 2025-26ನೇ ಸಾಲಿನ ಲೆಕ್ಕ ಶೀರ್ಷಿಕೆ: 2852-08-201-0-07-100 "Special Incentives to Sugarcane Growers Finance Assistance / Relief " ರಡಿ ರೂ. 300.00 ಕೋಟಿಗಳ (ಮುನ್ನೂರು ಕೋಟಿ ರೂಪಾಯಿಗಳು ಮಾತ್ರ) ಅನುದಾನವನ್ನು ಬಿಡುಗಡೆಗೊಳಿಸಿ ಆದೇಶಿಸಿರುತ್ತದೆ.

ಸರ್ಕಾರದ ಆದೇಶದಂತೆ ಬಿಡುಗಡೆಗೊಂಡಿರುವ ಅನುದಾನವನ್ನು ಸಂಬಂಧಪಟ್ಟ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡುವ ಸಂಬಂಧ ಈ ಕೆಳಕಂಡ ಆದೇಶ ಹೊರಡಿಸಲಾಗಿದೆ.

## ಆದೇಶ

**ಸಂಖ್ಯೆ:ಡಿಎಸ್‌ಕೆ/ಎಸ್‌ಜಿಎಫ್/ಅನುದಾನ-01/2025-26** **ದಿನಾಂಕ:25.02.2026**

ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳ ಹಿನ್ನಲೆಯಲ್ಲಿ 2025-26ನೇ ಹಂಗಾಮಿನಲ್ಲಿ ಕರ್ನಾಟಕ ರಾಜ್ಯದ ಸಕ್ಕರೆ ಕಾರ್ಖಾನೆಗಳಿಗೆ ಕಬ್ಬು ಸರಬರಾಜು ಮಾಡಿದ ಕರ್ನಾಟಕ ರಾಜ್ಯದ ರೈತರಿಗೆ ಸರ್ಕಾರದ ಆದೇಶ ಸಂಖ್ಯೆ: ಸಿಐ 324 ಎಸ್‌ಜಿಎಫ್ 2025, ದಿನಾಂಕ:08.11.2025 ಘೋಷಿಸಿರುವಂತೆ ಪ್ರತಿ ಒಂದು ಮೆ.ಟನ್ ಕಬ್ಬಿಗೆ ರೂ 50.00 ರಂತೆ ಆರ್ಥಿಕ ನೆರವನ್ನು ಪಾವತಿಸುವುದಕ್ಕಾಗಿ 2025-26ನೇ ಸಾಲಿನ ಲೆಕ್ಕ ಶೀರ್ಷಿಕೆ: 2852-08-201-0-07-100 "Special Incentives to Sugarcane Growers Finance Assistance / Relief " ರಡಿ ರೂ. 300.00 ಕೋಟಿಗಳ (ಮುನ್ನೂರು ಕೋಟಿ ರೂಪಾಯಿಗಳು ಮಾತ್ರ) ಅನುದಾನವನ್ನು ಸರ್ಕಾರವು ಬಿಡುಗಡೆ ಮಾಡಿದೆ. ದಿನಾಂಕ: 15.02.2026 ರಲ್ಲಿ ಇದ್ದಂತೆ ಕಾರ್ಖಾನೆಗಳು ಅರೆದಿರುವ ಕಬ್ಬಿನ ಪ್ರಮಾಣಕ್ಕೆ ಅನುಗುಣವಾಗಿ ರೂ.260,23,58,050.00 (ರೂ ಎರಡು ನೂರ ಅರವತ್ತು ಕೋಟಿ ಇಪ್ಪತ್ಮೂರು ಲಕ್ಷ ಐವತ್ತೆಂಟು ಸಾವಿರ ಐವತ್ತು ಮಾತ್ರ) ಗಳನ್ನು ಸಂಬಂಧಪಟ್ಟ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ಈ ಕೆಳಕಂಡ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟು ಬಿಡುಗಡೆಗೊಳಿಸಿ ಆದೇಶಿಸಿದೆ. ಉಳಿದ ಮೊತ್ತವನ್ನು ಹಂಗಾಮು ಮುಕ್ತಾಯಗೊಂಡ ನಂತರ ಕಬ್ಬು ಕಟಾವು ಪ್ರಮಾಣಕ್ಕನುಗುಣವಾಗಿ ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಲಾಗುವುದು. ಜಿಲ್ಲಾವಾರು ಮತ್ತು ಕಾರ್ಖಾನೆವಾರು ಬಿಡುಗಡೆ ಮಾಡಿರುವ ಅನುದಾನದ ವಿವರ ಈ ಕೆಳಕಂಡಂತಿದೆ.

(ದಿನಾಂಕ: 15.02.2026 ಕ್ಕೆ ಇದ್ದಂತೆ)

| ಕ್ರ.ಸಂ. | ಕಾರ್ಖಾನೆಯ ಹೆಸರು | 2025-26ನೇ ಸಾಲಿನ ಹಂಗಾಮಿನಲ್ಲಿ ರೈತರು ಕಾರ್ಖಾನೆಗೆ ಕಬ್ಬು ಸರಬರಾಜು ಮಾಡಿದ ಪ್ರಮಾಣ (ಮೆ.ಟನ್‌ಗಳಲ್ಲಿ) | ಸರ್ಕಾರವು ಘೋಷಿಸಿರುವಂತೆ ಪ್ರತಿ ಮೆ.ಟನ್ ಕಬ್ಬಿಗೆ ರೂ.50/- ರಂತೆ ರೈತರಿಗೆ ಸರ್ಕಾರದಿಂದ ಪಾವತಿಸಬೇಕಾಗಿರುವ ಒಟ್ಟು ಮೊತ್ತ (ರೂ.ಗಳಲ್ಲಿ) | ಕಬ್ಬು ಅರೆಯುವ ಕಾರ್ಯದ ಪ್ರಸ್ತುತ ಸ್ಥಿತಿ |
|---|---|---|---|---|
| 1 | 2 | 3 | 4=3*50 | 5 |
| | ಬೆಳಗಾವಿ ಜಿಲ್ಲೆ | | | |
| 1 | ಅರಿಹಂತ ಶುಗರ್ಸ್ ಇಂಡಸ್ಟ್ರೀಸ್ ಲಿ., ಜೈನಾಪುರ, ತಾಲ್ಲೂಕು: ಚಿಕ್ಕೋಡಿ, ಜಿಲ್ಲೆ: ಬೆಳಗಾವಿ. | 3,79,334.00 | 1,89,66,700.00 | ಪ್ರಗತಿಯಲ್ಲಿರುತ್ತದೆ |
| 2 | ಅಥಣಿ ಶುಗರ್ಸ್ ಲಿ., ವಿಷ್ಣುಅಣ್ಣಾನಗರ, ತಾಲ್ಲೂಕು: ಅಥಣಿ, ಜಿಲ್ಲೆ: ಬೆಳಗಾವಿ | 10,58430.00 | 5,29,21,500.00 | ಪ್ರಗತಿಯಲ್ಲಿರುತ್ತದೆ |
| 3 | ಬೆಳಗಾಂ ಶುಗರ್ಸ್ ಪ್ರೈ ಲಿ, ಹುದಲಿ ಗ್ರಾಮ, ತಾಲ್ಲೂಕು ಮತ್ತು ಜಿಲ್ಲೆ: ಬೆಳಗಾವಿ | 11,40,566.00 | 5,70,28,300.00 | ಪ್ರಗತಿಯಲ್ಲಿರುತ್ತದೆ |
| 4 | ಚಿದಾನಂದ ಬಸಪ್ರಭು ಕೋರೆ ಸಹಕಾರಿ ಸಕ್ಕರೆ ಕಾರ್ಖಾನೆ ನಿ, ಶಾಂತಪ್ಪನ ಮಿರ್ಜಿ ನಗರ, ತಾಲ್ಲೂಕು: ಚಿಕ್ಕೋಡಿ, ಜಿಲ್ಲೆ: ಬೆಳಗಾವಿ. | 10,59,813.00 | 5,29,90,650.00 | ಮುಕ್ತಾಯಗೊಳಿಸಿದೆ |
| 5 | ಇ.ಐ.ಡಿ ಪ್ಯಾರಿ (ಇಂಡಿಯಾ) ಲಿಮಿಟೆಡ್, ಖಾನಪೇಟ್, ರಾಮದುರ್ಗ ತಾಲ್ಲೂಕು, ಬೆಳಗಾವಿ ಜಿಲ್ಲೆ. (ಧನಲಕ್ಷ್ಮಿ ಸಹಕಾರಿ ಸಕ್ಕರೆ ಲಿಮಿಟೆಡ್ ಗುತ್ತಿಗೆದಾರರು) | 5,99,404.00 | 2,99,70,200.00 | ಪ್ರಗತಿಯಲ್ಲಿರುತ್ತದೆ |
| 6 | ದಿ. ಘಟಪ್ರಭಾ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಗೋಕಾಕ್, ಜಿಲ್ಲೆ: ಬೆಳಗಾವಿ. | 2,36,560.00 | 1,18,28,000.00 | ಪ್ರಗತಿಯಲ್ಲಿರುತ್ತದೆ |
| 7 | ಗೋಕಾಕ್ ಶುಗರ್ಸ್ ಲಿ., ಕೊಳವಿ, ತಾಲ್ಲೂಕು: ಗೋಕಾಕ್, ಜಿಲ್ಲೆ: ಬೆಳಗಾವಿ. | 4,20,036.00 | 2,10,01,800.00 | ಪ್ರಗತಿಯಲ್ಲಿರುತ್ತದೆ |
| 8 | ಶ್ರೀ ಹಾಲಸಿದ್ಧನಾಥ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಶಂಕರಾನಂದ ನಗರ, ನಿಪ್ಪಾಣಿ, ಜಿಲ್ಲೆ: ಬೆಳಗಾವಿ. | 5,77,672.00 | 2,88,83,600.00 | ಮುಕ್ತಾಯಗೊಳಿಸಿದೆ |
| 9 | ಹರ್ಷ ಶುಗರ್ಸ್ ಲಿ., ತಾಲ್ಲೂಕು: ಸವದತ್ತಿ, ಜಿಲ್ಲೆ: ಬೆಳಗಾವಿ. | 6,88,736.00 | 3,44,36,800.00 | ಪ್ರಗತಿಯಲ್ಲಿರುತ್ತದೆ |

| ಕ್ರ.ಸಂ. | ಕಾರ್ಖಾನೆಯ ಹೆಸರು | 2025-26ನೇ ಸಾಲಿನ ಹಂಗಾಮಿನಲ್ಲಿ ರೈತರು ಕಾರ್ಖಾನೆಗೆ ಕಬ್ಬು ಸರಬರಾಜು ಮಾಡಿದ ಪ್ರಮಾಣ (ಮೆ.ಟನ್‌ಗಳಲ್ಲಿ) | ಸರ್ಕಾರವು ಘೋಷಿಸಿರುವಂತೆ ಪ್ರತಿ ಮೆ.ಟನ್ ಕಬ್ಬಿಗೆ ರೂ.50/-ರಂತೆ ರೈತರಿಗೆ ಸರ್ಕಾರದಿಂದ ಪಾವತಿಸಬೇಕಾಗಿರುವ ಒಟ್ಟು ಮೊತ್ತ (ರೂ.ಗಳಲ್ಲಿ) | ಕಬ್ಬು ಅರೆಯುವ ಕಾರ್ಯದ ಪ್ರಸ್ತುತ ಸ್ಥಿತಿ |
|---|---|---|---|---|
| 1 | 2 | 3 | 4=3*50 | 5 |
| 10 | ಶ್ರೀ ಹಿರಣ್ಯಕೇಶಿ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಸಂಕೇಶ್ವರ, ಜಿಲ್ಲೆ: ಬೆಳಗಾವಿ. | 4,91,304.00 | 2,45,65,200.00 | ಮುಕ್ತಾಯಗೊಳಿಸಿದೆ |
| 11 | ಕೃಷ್ಣಾ ಸಹಕಾರಿ ಸಕ್ಕರೆ ಕಾರ್ಖಾನೆ (ನಿ), ಪೋಸ್ಟ್:ಸಂಕೋನಟ್ಟಿ ತಾಲ್ಲೂಕು:ಅಥಣಿ, ಜಿಲ್ಲೆ: ಬೆಳಗಾವಿ | 5,33,789.00 | 2,66,89,450.00 | ಮುಕ್ತಾಯಗೊಳಿಸಿದೆ |
| 12 | ಲೈಲಾ ಶುಗರ್ಸ್ ಪ್ರೈ ಲಿ., (ಶ್ರೀ ಭಾಗ್ಯಲಕ್ಷ್ಮಿ ಸಹಕಾರಿ ಸಕ್ಕರೆ ಗುತ್ತಿಗೆದಾರರು), ಖಾನಾಪುರ, ಜಿಲ್ಲೆ, ಬೆಳಗಾವಿ | 2,94,124.00 | 1,47,06,200.00 | ಮುಕ್ತಾಯಗೊಳಿಸಿದೆ |
| 13 | ಶ್ರೀ ಮಲಪ್ರಭಾ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಎಂ.ಕೆ. ಹುಬ್ಬಳ್ಳಿ, ಜಿಲ್ಲೆ: ಬೆಳಗಾವಿ | 2,33,116.00 | 1,16,55,800.00 | ಮುಕ್ತಾಯಗೊಳಿಸಿದೆ |
| 14 | ಶ್ರೀ ರೇಣುಕಾ ಶುಗರ್ಸ್ ಲಿ., ಯುನಿಟ್-III ಭಾವಚಿ, ಪೋಸ್ಟ್: ಮೆಕ್ಕಳ್ಳಿ, ತಾಲ್ಲೂಕು: ರಾಯಬಾಗ್, ಜಿಲ್ಲೆ: ಬೆಳಗಾವಿ. | 2,76,421.00 | 1,38,21,050.00 | ಮುಕ್ತಾಯಗೊಳಿಸಿದೆ |
| 15 | ಶ್ರೀ ರೇಣುಕಾ ಶುಗರ್ಸ್ ಲಿ., ಯುನಿಟ್- 4 ಬುರ್ಲಟ್ಟಿ, ತಾಲ್ಲೂಕು: ಅಥಣಿ, ಜಿಲ್ಲೆ: ಬೆಳಗಾವಿ | 10,36,420.00 | 5,18,21,000.00 | ಪ್ರಗತಿಯಲ್ಲಿರುತ್ತದೆ |
| 16 | ಶ್ರೀ ರೇಣುಕಾ ಶುಗರ್ಸ್ ಲಿ., ಯುನಿಟ್- I ಮುನೋಳಿ, ತಾಲ್ಲೂಕು: ಸವದತ್ತಿ, ಜಿಲ್ಲೆ: ಬೆಳಗಾವಿ | 9,27,140.00 | 4,63,57,000.00 | ಪ್ರಗತಿಯಲ್ಲಿರುತ್ತದೆ |
| 17 | ಸತೀಶ್ ಶುಗರ್ಸ್ ಲಿ., ಹುಣಶ್ಯಾಳ್ ಗ್ರಾಮ, ತಾಲ್ಲೂಕು: ಗೋಕಾಕ್, ಜಿಲ್ಲೆ: ಬೆಳಗಾವಿ. | 12,50,370.00 | 6,25,18,500.00 | ಪ್ರಗತಿಯಲ್ಲಿರುತ್ತದೆ |
| 18 | ಶ್ರೀ ಸಂಗಮ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಹಿಡಕಲ್‌ಡ್ಯಾಂ, ತಾಲ್ಲೂಕು:ಹುಕ್ಕೇರಿ, ಜಿಲ್ಲೆ: ಬೆಳಗಾವಿ | 2,06,399.00 | 1,03,19,950.00 | ಮುಕ್ತಾಯಗೊಳಿಸಿದೆ |

| ಕ್ರ.ಸಂ. | ಕಾರ್ಖಾನೆಯ ಹೆಸರು | 2025-26ನೇ ಸಾಲಿನ ಹಂಗಾಮಿನಲ್ಲಿ ರೈತರು ಕಾರ್ಖಾನೆಗೆ ಕಬ್ಬು ಸರಬರಾಜು ಮಾಡಿದ ಪ್ರಮಾಣ (ಮೆ.ಟನ್‌ಗಳಲ್ಲಿ) | ಸರ್ಕಾರವು ಘೋಷಿಸಿರುವಂತೆ ಪ್ರತಿ ಮೆ.ಟನ್ ಕಬ್ಬಿಗೆ ರೂ.50/- ರಂತೆ ರೈತರಿಗೆ ಸರ್ಕಾರದಿಂದ ಪಾವತಿಸಬೇಕಾಗಿರುವ ಒಟ್ಟು ಮೊತ್ತ (ರೂ.ಗಳಲ್ಲಿ) | ಕಬ್ಬು ಅರೆಯುವ ಕಾರ್ಯದ ಪ್ರಸ್ತುತ ಸ್ಥಿತಿ |
|---|---|---|---|---|
| 1 | 2 | 3 | 4=3*50 | 5 |
| 19 | ಶಿರಗುಪ್ಪಿ ಶುಗರ್ ವರ್ಕ್ಸ್ ಲಿ., ತಾಲ್ಲೂಕು: ಕಾಗವಾಡ, ಜಿಲ್ಲೆ: ಬೆಳಗಾವಿ | 7,43,566.00 | 3,71,78,300.00 | ಪ್ರಗತಿಯಲ್ಲಿರುತ್ತದೆ |
| 20 | ಶಿವಶಕ್ತಿ ಶುಗರ್ಸ್ ಲಿಮಿಟೆಡ್, ಸವದತ್ತಿ, ತಾಲ್ಲೂಕು: ರಾಯಬಾಗ, ಜಿಲ್ಲೆ:ಬೆಳಗಾವಿ | 17,38,039.00 | 8,69,01,950.00 | ಪ್ರಗತಿಯಲ್ಲಿರುತ್ತದೆ |
| 21 | ಶ್ರೀ ಶಿವಸಾಗರ ಶುಗರ್ ಅಂಡ್ ಆಗ್ರೋ ಪ್ರಾಡಕ್ಟ್ಸ್ ಲಿಮಿಟೆಡ್ (ಗುಡಗುಂಟಿ ಶುಗರ್ಸ್ ಅಂಡ್ ಬಯೋಎನರ್ಜಿ ಲಿಮಿಟೆಡ್ ಇದರ ಅಂಗಸಂಸ್ಥೆ), ಉದುಪುಡಿ ಗ್ರಾಮ, ತಾಲ್ಲೂಕು: ರಾಮದುರ್ಗ, ಜಿಲ್ಲೆ: ಬೆಳಗಾವಿ | 4,96,077.00 | 2,48,03,850.00 | ಪ್ರಗತಿಯಲ್ಲಿರುತ್ತದೆ |
| 22 | ಶ್ರೀ ಸೋಮೇಶ್ವರ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಬೈಲಹೊಂಗಲ, ಜಿಲ್ಲೆ: ಬೆಳಗಾವಿ | 2,18,353.00 | 1,09,17,650.00 | ಮುಕ್ತಾಯಗೊಳಿಸಿದೆ |
| 23 | ಸೌಭಾಗ್ಯಲಕ್ಷ್ಮಿ ಶುಗರ್ಸ್, ಹಿರೇನಂದಿ ಗ್ರಾಮ, ತಾಲ್ಲೂಕು ಗೋಕಾಕ್, ಜಿಲ್ಲೆ: ಬೆಳಗಾವಿ | 4,12,551.00 | 2,06,27,550.00 | ಪ್ರಗತಿಯಲ್ಲಿರುತ್ತದೆ |
| 24 | ಶ್ರೀ ಬಸವೇಶ್ವರ ಶುಗರ್ಸ್ ಲಿಮಿಟೆಡ್, ಬಳ್ಳಿಗೇರಿ, ತಾಲ್ಲೂಕು: ಅಥಣಿ, ಜಿಲ್ಲೆ: ಬೆಳಗಾವಿ | 78,861.00 | 39,43,050.00 | ಪ್ರಗತಿಯಲ್ಲಿರುತ್ತದೆ |
| 25 | ದಿ ಉಗಾರ್ ಶುಗರ್ ವರ್ಕ್ಸ್ ಲಿ, ಪೋಸ್ಟ್: ಉಗಾರ್‌ಖುರ್ದ್, ಜಿಲ್ಲೆ: ಬೆಳಗಾವಿ | 13,72,750.00 | 6,86,37,500.00 | ಪ್ರಗತಿಯಲ್ಲಿರುತ್ತದೆ |
| 26 | ವೆಂಕಟೇಶ್ವರ ಪವರ್ ಪ್ರಾಜೆಕ್ಟ್ಸ್ ಲಿ., ಪೋಸ್ಟ್: ಬೇಡಿಕಿಹಾಲ, ತಾಲ್ಲೂಕು: ನಿಪ್ಪಾಣಿ, ಜಿಲ್ಲೆ: ಬೆಳಗಾವಿ. | 11,07,836.00 | 5,53,91,800.00 | ಪ್ರಗತಿಯಲ್ಲಿರುತ್ತದೆ |
| 27 | ವಿಶ್ವರಾಜ್ ಶುಗರ್ಸ್ ಲಿಮಿಟೆಡ್,, ಬೆಲ್ಲದ-ಬಾಗೇವಾಡಿ, ತಾಲ್ಲೂಕು: ಹುಕ್ಕೇರಿ, ಜಿಲ್ಲೆ: ಬೆಳಗಾವಿ | 7,86,008.00 | 3,93,00,400.00 | ಮುಕ್ತಾಯಗೊಳಿಸಿದೆ |

| ಕ್ರ.ಸಂ. | ಕಾರ್ಖಾನೆಯ ಹೆಸರು | 2025-26ನೇ ಸಾಲಿನ ಹಂಗಾಮಿನಲ್ಲಿ ರೈತರು ಕಾರ್ಖಾನೆಗೆ ಕಬ್ಬು ಸರಬರಾಜು ಮಾಡಿದ ಪ್ರಮಾಣ (ಮೆ.ಟನ್‌ಗಳಲ್ಲಿ) | ಸರ್ಕಾರವು ಘೋಷಿಸಿರುವಂತೆ ಪ್ರತಿ ಮೆ.ಟನ್ ಕಬ್ಬಿಗೆ ರೂ.50/- ರಂತೆ ರೈತರಿಗೆ ಸರ್ಕಾರದಿಂದ ಪಾವತಿಸಬೇಕಾಗಿರುವ ಒಟ್ಟು ಮೊತ್ತ (ರೂ.ಗಳಲ್ಲಿ) | ಕಬ್ಬು ಅರೆಯುವ ಕಾರ್ಯದ ಪ್ರಸ್ತುತ ಸ್ಥಿತಿ |
|---|---|---|---|---|
| 1 | 2 | 3 | 4=3*50 | 5 |
| 28 | ಇಂಡಿಯನ್ ಕೇನ್ ಪವರ್ ಲಿ. ಘಟಕ: ಅಲಗವಾಡಿ ಬೀರೇಶ್ವರ ಶುಗರ್ಸ್ ಅಲಗವಾಡಿ ಗ್ರಾಮ, ತಾಲ್ಲೂಕು : ರಾಯಬಾಗ, ಜಿಲ್ಲೆ: ಬೆಳಗಾವಿ | 8,98,861.00 | 4,49,43,050.00 | ಪ್ರಗತಿಯಲ್ಲಿರುತ್ತದೆ |
| 29 | ಇನಾಂದಾರ್ ಶುಗರ್ಸ್ ಲಿಮಿಟೆಡ್, ಹಿರೇಕೊಪ್ಪ, ಮಾರಕುಂಬಿ ತಾಲ್ಲೂಕು,:ಸವದತ್ತಿ ಜಿಲ್ಲೆ: ಬೆಳಗಾವಿ | 5,19,345.00 | 2,59,67,250.00 | ಪ್ರಗತಿಯಲ್ಲಿರುತ್ತದೆ |
| | **ಒಟ್ಟು** | **1,97,81,881** | **98,90,94,050.00** | |
| | **ಬಾಗಲಕೋಟೆ ಜಿಲ್ಲೆ** | | | |
| 30 | ಬಾದಾಮಿ ಶುಗರ್ಸ್ ಲಿಮಿಟೆಡ್, ಮಸ್ತಿಗೇರಿ, ತಾಲ್ಲೂಕು: ಬಾದಾಮಿ, ಜಿಲ್ಲೆ: ಬಾಗಲಕೋಟೆ | 2,96,988.00 | 1,48,49,400.00 | ಪ್ರಗತಿಯಲ್ಲಿರುತ್ತದೆ |
| 31 | ಬೀಳಗಿ ಶುಗರ್ ಮಿಲ್ ಲಿಮಿಟೆಡ್, ಬೀಳಗಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ. | 10,49,840.00 | 5,24,92,000.00 | ಪ್ರಗತಿಯಲ್ಲಿರುತ್ತದೆ |
| 32 | ಇಐಡಿ ಪ್ಯಾರಿ (ಇಂಡಿಯಾ) ಲಿಮಿಟೆಡ್,, ನಾಗರಾಳ, ನೈನಿಗಲಿ, ಬಾಗಲಕೋಟೆ ತಾಲ್ಲೂಕು, & ಜಿಲ್ಲೆ. | 6,94,974.00 | 3,47,48,700.00 | ಪ್ರಗತಿಯಲ್ಲಿರುತ್ತದೆ |
| 33 | ಜೆಮ್ ಶುಗರ್ಸ್ ಲಿ., ಕುಂದರಗಿ, ಬೀಳಗಿ, ಬಾಗಲಕೋಟೆ ಜಿಲ್ಲೆ. | 6,99,446.00 | 3,49,72,300.00 | ಪ್ರಗತಿಯಲ್ಲಿರುತ್ತದೆ |
| 34 | ಗೋದಾವರಿ ಬಯೋರಿಫೈನರೀಸ್ ಲಿ., ಸಮೀರವಾಡಿ, ಬಾಗಲಕೋಟೆ | 17,10,311.00 | 8,55,15,550.00 | ಪ್ರಗತಿಯಲ್ಲಿರುತ್ತದೆ |
| 35 | ಇಂಡಿಯನ್ ಕೇನ್ ಪವರ್ ಲಿ., ಉತ್ತೂರು, ಮುದೋಳ್, ಬಾಗಲಕೋಟೆ ಜಿಲ್ಲೆ. | 20,44,130.00 | 10,22,06,500.00 | ಪ್ರಗತಿಯಲ್ಲಿರುತ್ತದೆ |

| ಕ್ರ.ಸಂ. | ಕಾರ್ಖಾನೆಯ ಹೆಸರು | 2025-26ನೇ ಸಾಲಿನ ಹಂಗಾಮಿನಲ್ಲಿ ರೈತರು ಕಾರ್ಖಾನೆಗೆ ಕಬ್ಬು ಸರಬರಾಜು ಮಾಡಿದ ಪ್ರಮಾಣ (ಮೆ.ಟನ್‌ಗಳಲ್ಲಿ) | ಸರ್ಕಾರವು ಘೋಷಿಸಿರುವಂತೆ ಪ್ರತಿ ಮೆ.ಟನ್ ಕಬ್ಬಿಗೆ ರೂ.50/- ರಂತೆ ರೈತರಿಗೆ ಸರ್ಕಾರದಿಂದ ಪಾವತಿಸಬೇಕಾಗಿರುವ ಒಟ್ಟು ಮೊತ್ತ (ರೂ.ಗಳಲ್ಲಿ) | ಕಬ್ಬು ಅರೆಯುವ ಕಾರ್ಯದ ಪ್ರಸ್ತುತ ಸ್ಥಿತಿ |
|---|---|---|---|---|
| 1 | 2 | 3 | 4=3*50 | 5 |
| 36 | ಜಮಖಂಡಿ ಶುಗರ್ಸ್ ಲಿಮಿಟೆಡ್, ಹಿರೆಪಡಸಲಗಿ, ಪೋಸ್ಟ್: ನಾಗನೂರು, ತಾಲ್ಲೂಕು: ಜಮಖಂಡಿ, ಜಿಲ್ಲೆ: ಬಾಗಲಕೋಟೆ | 8,52,467.00 | 4,26,23,350.00 | ಪ್ರಗತಿಯಲ್ಲಿರುತ್ತದೆ |
| 37 | ಮೆಲ್ಗೊ ಶುಗರ್ಸ್ ಲಿಮಿಟೆಡ್, ಶಿರೂರು, ತಾಲ್ಲೂಕು ಮತ್ತು ಜಿಲ್ಲೆ ಬಾಗಲಕೋಟೆ | 6,31,383.00 | 3,15,69,150.00 | ಪ್ರಗತಿಯಲ್ಲಿರುತ್ತದೆ |
| 38 | ಎಂ.ಆರ್.ಎನ್ ಚಾಮುಂಡಿ ಕೇನ್ ಪವರ್ & ಬಯೋರಿಫೈನರೀಸ್ ಪ್ರೈ ಲಿ., ಕಲ್ಲಾಪುರ ಎಸ್.ಕೆ, ತಾಲ್ಲೂಕು: ಬಾದಾಮಿ, ಜಿಲ್ಲೆ: ಬಾಗಲಕೋಟೆ | 6,90,744.00 | 3,45,37,200.00 | ಮುಕ್ತಾಯಗೊಳಿಸಿದೆ |
| 39 | ನಿರಾಣಿ ಶುಗರ್ಸ್ ಲಿಮಿಟೆಡ್, ಮುದೋಳ ತಾಲ್ಲೂಕು: ಮುದೋಳ ಜಿಲ್ಲೆ: ಬಾಗಲಕೋಟೆ | 18,53,542.00 | 9,26,77,100.00 | ಪ್ರಗತಿಯಲ್ಲಿರುತ್ತದೆ |
| 40 | ಶ್ರೀ ಪ್ರಭುಲಿಂಗೇಶ್ವರ ಶುಗರ್ಸ್ & ಕೆಮಿಕಲ್ಸ್ ಲಿ., ಜಮಖಂಡಿ ತಾಲ್ಲೂಕು, ಜಿಲ್ಲೆ: ಬಾಗಲಕೋಟೆ | 12,93,830.00 | 6,46,91,500.00 | ಪ್ರಗತಿಯಲ್ಲಿರುತ್ತದೆ |
| 41 | ಶ್ರೀ ಕೇದಾರನಾಥ್ ಶುಗರ್ ಅಂಡ್ ಆಗ್ರೋ ಪ್ರಾಡಕ್ಟ್ಸ್ ಲಿಮಿಟೆಡ್, ಕೆರಕಲಮಟ್ಟಿ, ತಾಲ್ಲೂಕು: ಬಾದಾಮಿ, ಜಿಲ್ಲೆ: ಬಾಗಲಕೋಟೆ | 4,43,475.00 | 2,21,73,750.00 | ಮುಕ್ತಾಯಗೊಳಿಸಿದೆ |
| 42 | ಶ್ರೀ ಸಾಯಿಪ್ರಿಯ ಶುಗರ್ಸ್ ಲಿ., ಹಿಪ್ಪರಗಿ-ಮೈಗೂರ, ತಾಲ್ಲೂಕು: ಜಮಖಂಡಿ ಜಿಲ್ಲೆ: ಬಾಗಲಕೋಟೆ | 14,15,827.00 | 7,07,91,350.00 | ಪ್ರಗತಿಯಲ್ಲಿರುತ್ತದೆ |
| 43 | ಬೀಳಗಿ ಶುಗರ್ ಮಿಲ್ ಲಿಮಿಟೆಡ್, ಯುನಿಟ್-2, (ರೈತರ ಸಹಕಾರಿ ಸಕ್ಕರೆ ಕಾರ್ಖಾನೆ ಗುತ್ತಿಗೆದಾರರು) ರನ್ನನಗರ, ತಿಮ್ಮಾಪೂರ, ತಾಲ್ಲೂಕು: ಮುಧೋಳ್, ಜಿಲ್ಲೆ: ಬಾಗಲಕೋಟೆ | 2,44,404.00 | 1,22,20,200.00 | ಮುಕ್ತಾಯಗೊಳಿಸಿದೆ |
| | **ಒಟ್ಟು** | **1,39,21,361.00** | **69,60,68,050.00** | |

| ಕ್ರ.ಸಂ. | ಕಾರ್ಖಾನೆಯ ಹೆಸರು | 2025-26ನೇ ಸಾಲಿನ ಹಂಗಾಮಿನಲ್ಲಿ ರೈತರು ಕಾರ್ಖಾನೆಗೆ ಕಬ್ಬು ಸರಬರಾಜು ಮಾಡಿದ ಪ್ರಮಾಣ (ಮೆ.ಟನ್‌ಗಳಲ್ಲಿ) | ಸರ್ಕಾರವು ಘೋಷಿಸಿರುವಂತೆ ಪ್ರತಿ ಮೆ.ಟನ್ ಕಬ್ಬಿಗೆ ರೂ.50/- ರಂತೆ ರೈತರಿಗೆ ಸರ್ಕಾರದಿಂದ ಪಾವತಿಸಬೇಕಾಗಿರುವ ಒಟ್ಟು ಮೊತ್ತ (ರೂ.ಗಳಲ್ಲಿ) | ಕಬ್ಬು ಅರೆಯುವ ಕಾರ್ಯದ ಪ್ರಸ್ತುತ ಸ್ಥಿತಿ |
|---|---|---|---|---|
| 1 | 2 | 3 | 4=3*50 | 5 |
| | **ಬಳ್ಳಾರಿ ಜಿಲ್ಲೆ** | | | |
| 44 | ಎನ್‌ಎಸ್‌ಎಲ್ ಶುಗರ್ಸ್ (ತುಂಗಾಭದ್ರಾ) ಲಿಮಿಟೆಡ್., ದೇಶನೂರು, ತಾಲ್ಲೂಕು: ಶಿರಗುಪ್ಪ, ಜಿಲ್ಲೆ: ಬಳ್ಳಾರಿ. | 2,55,407.00 | 1,27,70,350.00 | ಮುಕ್ತಾಯಗೊಳಿಸಿದೆ |
| | **ಒಟ್ಟು** | **2,55,407.00** | **1,27,70,350.00** | |
| | **ಬೀದರ್ ಜಿಲ್ಲೆ** | | | |
| 45 | ಭಾಲ್ಕೇಶ್ವರ ಶುಗರ್ಸ್ ಲಿ. ಮಡಕಟ್ಟಿ ಕ್ರಾಸ್, ಬಾಜೋಳಗ, ತಾಲ್ಲೂಕು: ಭಾಲ್ಕಿ, ಜಿಲ್ಲೆ: ಬೀದರ್ | 3,26,064.00 | 1,63,03,200.00 | ಪ್ರಗತಿಯಲ್ಲಿರುತ್ತದೆ |
| 46 | ಬೀದರ್ ಕಿಸಾನ್ ಸಕ್ಕರೆ ಕಾರ್ಖಾನೆ ಲಿ., ಮೊಗದಲ್ ಗ್ರಾಮ, ಪೋಸ್ಟ್: ಮಾರಕುಂಡಾ, ತಾಲ್ಲೂಕು ಮತ್ತು ಜಿಲ್ಲೆ ಬೀದರ್ | 4,45,632.00 | 2,22,81,600.00 | ಪ್ರಗತಿಯಲ್ಲಿರುತ್ತದೆ |
| 47 | ದಿ ಮಹಾತ್ಮಗಾಂಧಿ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಭಾಲ್ಕಿ, ಬೀದರ್ | 3,32,100.00 | 1,66,05,000.00 | ಪ್ರಗತಿಯಲ್ಲಿರುತ್ತದೆ |
| 48 | ನಾರಂಜ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಇಮಾಮಪುರ ಗ್ರಾಮ, (ಜನವಾಡ ಹತ್ತಿರ) ತಾಲ್ಲೂಕು & ಜಿಲ್ಲೆ : ಬೀದರ್ | 2,54,026.00 | 1,27,01,300.00 | ಪ್ರಗತಿಯಲ್ಲಿರುತ್ತದೆ |
| 49 | ಶ್ರೀ ಭವಾನಿ ಖಂಡಸಾರಿ ಶುಗರ್ಸ್ ಲಿ, ಬರೂರು ಗ್ರಾಮ, ತಾಲ್ಲೂಕು & ಜಿಲ್ಲೆ ಬೀದರ್. | 1,88,106.00 | 94,05,300.00 | ಪ್ರಗತಿಯಲ್ಲಿರುತ್ತದೆ |
| | **ಒಟ್ಟು** | **15,45,928.00** | **7,72,96,400.00** | |
| | **ಚಾಮರಾಜನಗರ ಜಿಲ್ಲೆ** | | | |
| 50 | ಬನ್ನಾರಿ ಅಮ್ಮನ್ ಶುಗರ್ಸ್ ಲಿ., ಯುನಿಟ್-III, ಕುಂತೂರು ಗ್ರಾಮ, ತಾಲ್ಲೂಕು: ಕೊಳ್ಳೇಗಾಲ, ಜಿಲ್ಲೆ: ಚಾಮರಾಜನಗರ. | 5,09,123.00 | 2,54,56,150.00 | ಮುಕ್ತಾಯಗೊಳಿಸಿದೆ |
| | **ಒಟ್ಟು** | **5,09,123.00** | **2,54,56,150.00** | |

| ಕ್ರ.ಸಂ. | ಕಾರ್ಖಾನೆಯ ಹೆಸರು | 2025-26ನೇ ಸಾಲಿನ ಹಂಗಾಮಿನಲ್ಲಿ ರೈತರು ಕಾರ್ಖಾನೆಗೆ ಕಬ್ಬು ಸರಬರಾಜು ಮಾಡಿದ ಪ್ರಮಾಣ (ಮೆ.ಟನ್‌ಗಳಲ್ಲಿ) | ಸರ್ಕಾರವು ಘೋಷಿಸಿರುವಂತೆ ಪ್ರತಿ ಮೆ.ಟನ್ ಕಬ್ಬಿಗೆ ರೂ.50/- ರಂತೆ ರೈತರಿಗೆ ಸರ್ಕಾರದಿಂದ ಪಾವತಿಸಬೇಕಾಗಿರುವ ಒಟ್ಟು ಮೊತ್ತ (ರೂ.ಗಳಲ್ಲಿ) | ಕಬ್ಬು ಅರೆಯುವ ಕಾರ್ಯದ ಪ್ರಸ್ತುತ ಸ್ಥಿತಿ |
|---|---|---|---|---|
| 1 | 2 | 3 | 4=3*50 | 5 |
| | **ದಾವಣಗೆರೆ ಜಿಲ್ಲೆ** | | | |
| 51 | ದಾವಣಗೆರೆ ಶುಗರ್ಸ್ ಲಿ., ಕುಕ್ಕುವಾಡ, ತಾಲ್ಲೂಕು & ಜಿಲ್ಲೆ ದಾವಣಗೆರೆ | 1,87,913.00 | 93,95,650.00 | ಮುಕ್ತಾಯಗೊಳಿಸಿದೆ |
| | **ಒಟ್ಟು** | **1,87,913.00** | **93,95,650.00** | |
| | **ಗದಗ ಜಿಲ್ಲೆ** | | | |
| 52 | ವಿಜಯನಗರ ಶುಗರ್ಸ್ ಪ್ರೈ. ಲಿಮಿಟೆಡ್, (ಮೃದಗಿರಿ ಸಹಕಾರಿ ಸಕ್ಕರೆ ಕಾರ್ಖಾನೆ ಲಿಮಿಟೆಡ್ ನ ಗುತ್ತಿಗೆದಾರರು), ಗಂಗಾಪುರ ಗ್ರಾಮ ತಾಲ್ಲೂಕು: ಮುಂಡರಗಿ, ಜಿಲ್ಲೆ ಗದಗ. | 4,47,221.00 | 2,23,61,050.00 | ಮುಕ್ತಾಯಗೊಳಿಸಿದೆ |
| | **ಒಟ್ಟು** | **4,47,221.00** | **2,23,61,050.00** | |
| | **ಹಾಸನ ಜಿಲ್ಲೆ** | | | |
| 53 | ಚಾಮುಂಡೇಶ್ವರಿ ಶುಗರ್ಸ್ ಲಿ., (ಹೇಮಾವತಿ ಸಹಕಾರಿ ಸಕ್ಕರೆ ಕಾರ್ಖಾನೆಯ ಗುತ್ತಿಗೆದಾರರು), ಶ್ರೀನಿವಾಸಪುರ ತಾಲ್ಲೂಕು: ಚನ್ನರಾಯಪಟ್ಟಣ ಜಿಲ್ಲೆ:ಹಾಸನ | 3,00,024.00 | 1,50,01,200.00 | ಮುಕ್ತಾಯಗೊಳಿಸಿದೆ |
| | **ಒಟ್ಟು** | **3,00,024.00** | **1,50,01,200.00** | |
| | **ಹಾವೇರಿ ಜಿಲ್ಲೆ** | | | |
| 54 | ಜಿಎಂ ಶುಗರ್ ಅಂಡ್ ಎನರ್ಜಿ ಲಿ.,(ಗುತ್ತಿಗೆದಾರರು ಕರ್ನಾಟಕ ಸಹಕಾರಿ ಸಕ್ಕರೆ ಕಾರ್ಖಾನೆ ನಿ.) ಸಂಗೂರು, ತಾಲ್ಲೂಕು ಮತ್ತು ಜಿಲ್ಲೆ ಹಾವೇರಿ. | 2,53,533.00 | 1,26,76,650.00 | ಮುಕ್ತಾಯಗೊಳಿಸಿದೆ |
| 55 | ಜಿಎಂ ಶುಗರ್ ಅಂಡ್ ಎನರ್ಜಿ ಲಿ., ಯುನಿಟ್-2, ಚಟ್ಟಿಹಳ್ಳಿ, ಗ್ರಾಮ, ತಾಲ್ಲೂಕು: ರಟ್ಟೀ ಹಳ್ಳಿ, ಜಿಲ್ಲೆ: ಹಾವೇರಿ | 4,91,021.00 | 2,45,51,050.00 | ಮುಕ್ತಾಯಗೊಳಿಸಿದೆ |

| ಕ್ರ.ಸಂ. | ಕಾರ್ಖಾನೆಯ ಹೆಸರು | 2025-26ನೇ ಸಾಲಿನ ಹಂಗಾಮಿನಲ್ಲಿ ರೈತರು ಕಾರ್ಖಾನೆಗೆ ಕಬ್ಬು ಸರಬರಾಜು ಮಾಡಿದ ಪ್ರಮಾಣ (ಮೆ.ಟನ್‌ಗಳಲ್ಲಿ) | ಸರ್ಕಾರವು ಘೋಷಿಸಿರುವಂತೆ ಪ್ರತಿ ಮೆ.ಟನ್ ಕಬ್ಬಿಗೆ ರೂ.50/-ರಂತೆ ರೈತರಿಗೆ ಸರ್ಕಾರದಿಂದ ಪಾವತಿಸಬೇಕಾಗಿರುವ ಒಟ್ಟು ಮೊತ್ತ (ರೂ.ಗಳಲ್ಲಿ) | ಕಬ್ಬು ಅರೆಯುವ ಕಾರ್ಯದ ಪ್ರಸ್ತುತ ಸ್ಥಿತಿ |
|---|---|---|---|---|
| 1 | 2 | 3 | 4=3*50 | 5 |
| 56 | ವಿ.ಐ.ಎನ್.ಪಿ ಡಿಸ್ಟಿಲರೀಸ್ & ಶುಗರ್ಸ್ ಪ್ರೈ ಲಿ., ಕೋಣನಕೆರೆ ಗ್ರಾಮ, ಶಿಗ್ಗಾಂವ್ ತಾಲ್ಲೂಕು, ಹಾವೇರಿ ಜಿಲ್ಲೆ. | 5,58,848.00 | 2,79,42,400.00 | ಮುಕ್ತಾಯಗೊಳಿಸಿದೆ |
| | **ಒಟ್ಟು** | **13,03,401.00** | **6,51,70,100.00** | |
| | **ಕಲಬುರಗಿ ಜಿಲ್ಲೆ** | | | |
| 57 | ಕೆಪಿಆರ್ ಶುಗರ್ & ಅಪ್ಪರೆಲ್ಸ್ ಲಿ., ಚಿನ್ನಮ್ಮಗೇರಿ ಗ್ರಾಮ, ಚೌಡಾಪುರ, ತಾಲ್ಲೂಕು: ಅಫಜಲಪುರ ಜಿಲ್ಲೆ: ಕಲಬುರಗಿ | 11,72,183.00 | 5,86,09,150.00 | ಪ್ರಗತಿಯಲ್ಲಿರುತ್ತದೆ |
| 58 | ಎನ್‌ಎಸ್‌ಎಲ್ ಶುಗರ್ಸ್ (ಆಳಂದ ಸಹಕಾರಿ ಸಕ್ಕರೆ ಕಾರ್ಖಾನೆ ಗುತ್ತಿಗೆದಾರರು) ಭೂಸನೂರ್, ತಾಲ್ಲೂಕು: ಆಳಂದ, ಜಿಲ್ಲೆ: ಕಲಬುರಗಿ | 7,60,120.00 | 3,80,06,000.00 | ಪ್ರಗತಿಯಲ್ಲಿರುತ್ತದೆ |
| 59 | ಶ್ರೀ ರೇಣುಕಾ ಶುಗರ್ಸ್ ಲಿಮಿಟೆಡ್, ಯುನಿಟ್-5, ಹವಳಗಾ ಗ್ರಾಮ, ತಾಲ್ಲೂಕು: ಅಫ್‌ಜಲಪುರ, ಜಿಲ್ಲೆ: ಕಲಬುರಗಿ. | 7,38,050.00 | 3,69,02,500.00 | ಪ್ರಗತಿಯಲ್ಲಿರುತ್ತದೆ |
| 60 | ಸಿದ್ಧಸಿರಿ ಸೌಹಾರ್ದ ಸಹಕಾರಿ ನಿಯಮಿತ, ತಾಲ್ಲೂಕು: ಚಿಂಚೋಳಿ, ಜಿಲ್ಲೆ: ಕಲಬುರಗಿ | 4,64,161.00 | 2,32,08,050.00 | ಪ್ರಗತಿಯಲ್ಲಿರುತ್ತದೆ |
| 61 | ದಿ ಉಗಾರ್ ಶುಗರ್ ವರ್ಕ್ಸ್ ಲಿ, ನಾಗರಹಳ್ಳಿ, ಮಲ್ಲಿ, ತಾಲ್ಲೂಕು: ಜೇವರ್ಗಿ, ಜಿಲ್ಲೆ: ಕಲಬುರಗಿ | 3,13,430.00 | 1,56,71,500.00 | ಪ್ರಗತಿಯಲ್ಲಿರುತ್ತದೆ |
| | **ಒಟ್ಟು** | **3,44,7944.00** | **17,23,97,200.00** | |
| | **ಮಂಡ್ಯ ಜಿಲ್ಲೆ** | | | |
| 62 | ಕೋರಮಂಡಲ್ ಶುಗರ್ಸ್ ಲಿ., ಮಾಕವಳ್ಳಿ, ತಾಲ್ಲೂಕು: ಕೆ.ಆರ್.ಪೇಟೆ ಜಿಲ್ಲೆ: ಮಂಡ್ಯ | 3,12,118.00 | 1,56,05,900.00 | ಮುಕ್ತಾಯಗೊಳಿಸಿದೆ |
| 63 | ಮೈಸೂರು ಸಕ್ಕರೆ ಕಂಪನಿ ನಿ., ಸಕ್ಕರೆ ನಗರ, ಮಂಡ್ಯ | 1,19,206.00 | 59,60,300.00 | ಮುಕ್ತಾಯಗೊಳಿಸಿದೆ |

| ಕ್ರ.ಸಂ. | ಕಾರ್ಖಾನೆಯ ಹೆಸರು | 2025-26ನೇ ಸಾಲಿನ ಹಂಗಾಮಿನಲ್ಲಿ ರೈತರು ಕಾರ್ಖಾನೆಗೆ ಕಬ್ಬು ಸರಬರಾಜು ಮಾಡಿದ ಪ್ರಮಾಣ (ಮೆ.ಟನ್‌ಗಳಲ್ಲಿ) | ಸರ್ಕಾರವು ಘೋಷಿಸಿರುವಂತೆ ಪ್ರತಿ ಮೆ.ಟನ್ ಕಬ್ಬಿಗೆ ರೂ.50/- ರಂತೆ ರೈತರಿಗೆ ಸರ್ಕಾರದಿಂದ ಪಾವತಿಸಬೇಕಾಗಿರುವ ಒಟ್ಟು ಮೊತ್ತ (ರೂ.ಗಳಲ್ಲಿ) | ಕಬ್ಬು ಅರೆಯುವ ಕಾರ್ಯದ ಪ್ರಸ್ತುತ ಸ್ಥಿತಿ |
|---|---|---|---|---|
| 1 | 2 | 3 | 4=3*50 | 5 |
| 64 | ಎಂ.ಆರ್.ಎನ್ ಕೇನ್ ಪವರ್ ಅಂಡ್ ಬಯೋರಿಫೈನರೀಸ್ ಪ್ರೈ ಲಿ, (ಪಾಂಡವಪುರ ಸಹಕಾರಿ ಸಕ್ಕರೆ ಕಾರ್ಖಾನೆಯ ಗುತ್ತಿಗೆದಾರರು), ತಾಲ್ಲೂಕು: ಪಾಂಡವಪುರ, ಜಿಲ್ಲೆ: ಮಂಡ್ಯ | 4,54,109.00 | 2,27,05,450.00 | ಮುಕ್ತಾಯಗೊಳಿಸಿದೆ |
| 65 | ಎನ್.ಎಸ್.ಎಲ್ ಶುಗರ್ಸ್, ಕೊಪ್ಪ, ತಾಲ್ಲೂಕು: ಮದ್ದೂರು, ಜಿಲ್ಲೆ:ಮಂಡ್ಯ | 5,16,147.00 | 2,58,07,350.00 | ಮುಕ್ತಾಯಗೊಳಿಸಿದೆ |
| 66 | ಶ್ರೀ ಚಾಮುಂಡೇಶ್ವರಿ ಶುಗರ್ಸ್ ಲಿ, ಭಾರತಿ ನಗರ, ತಾಲ್ಲೂಕು: ಮದ್ದೂರು, ಜಿಲ್ಲೆ:ಮಂಡ್ಯ | 6,06,904.00 | 3,03,45,200.00 | ಮುಕ್ತಾಯಗೊಳಿಸಿದೆ |
| | **ಒಟ್ಟು** | **20,08,484.00** | **10,04,24,200.00** | |
| | **ಮೈಸೂರು ಜಿಲ್ಲೆ** | | | |
| 67 | ಬನ್ನಾರಿ ಅಮ್ಮನ್ ಶುಗರ್ಸ್ ಲಿ, ಅಲಗಂಚಿ ಗ್ರಾಮ, ತಾಲ್ಲೂಕು: ನಂಜನಗೂಡು, ಜಿಲ್ಲೆ: ಮೈಸೂರು | 7,52,329.00 | 3,76,16,450.00 | ಮುಕ್ತಾಯಗೊಳಿಸಿದೆ |
| | **ಒಟ್ಟು** | **7,52,329.00** | **3,76,16,450.00** | |
| | **ಉತ್ತರ ಕನ್ನಡ ಜಿಲ್ಲೆ** | | | |
| 68 | ಇಐಡಿ ಪ್ಯಾರಿ (ಇಂಡಿಯಾ) ಲಿ., ಹುಲ್ಲಟ್ಟಿ ಗ್ರಾಮ, ಹಲಿಯಾಲ, ಉತ್ತರ ಕನ್ನಡ ಜಿಲ್ಲೆ, | 11,14,791.00 | 5,57,39,550.00 | ಪ್ರಗತಿಯಲ್ಲಿರುತ್ತದೆ |
| | **ಒಟ್ಟು** | **11,14,791.00** | **5,57,39,550.00** | |
| | **ವಿಜಯಪುರ ಜಿಲ್ಲೆ** | | | |
| 69 | ಇಂಡಿಯನ್ ಶುಗರ್ ಮ್ಯಾನುಫ್ಯಾಕ್ಚರಿಂಗ್ ಕಂಪನಿ ಲಿ., ಹಾವಿನಾಳ್, ತಾಲ್ಲೂಕು: ಇಂಡಿ, ಜಿಲ್ಲೆ: ವಿಜಯಪುರ. | 4,23,390.00 | 2,11,69,500.00 | ಪ್ರಗತಿಯಲ್ಲಿರುತ್ತದೆ |

| ಕ್ರ.ಸಂ. | ಕಾರ್ಖಾನೆಯ ಹೆಸರು | 2025-26ನೇ ಸಾಲಿನ ಹಂಗಾಮಿನಲ್ಲಿ ರೈತರು ಕಾರ್ಖಾನೆಗೆ ಕಬ್ಬು ಸರಬರಾಜು ಮಾಡಿದ ಪ್ರಮಾಣ (ಮೆ.ಟನ್‌ಗಳಲ್ಲಿ) | ಸರ್ಕಾರವು ಘೋಷಿಸಿರುವಂತೆ ಪ್ರತಿ ಮೆ.ಟನ್ ಕಬ್ಬಿಗೆ ರೂ.50/- ರಂತೆ ರೈತರಿಗೆ ಸರ್ಕಾರದಿಂದ ಪಾವತಿಸಬೇಕಾಗಿರುವ ಒಟ್ಟು ಮೊತ್ತ (ರೂ.ಗಳಲ್ಲಿ) | ಕಬ್ಬು ಅರೆಯುವ ಕಾರ್ಯದ ಪ್ರಸ್ತುತ ಸ್ಥಿತಿ |
|---|---|---|---|---|
| 1 | 2 | 3 | 4=3*50 | 5 |
| 70 | ಜಮಖಂಡಿ ಶುಗರ್ಸ್ ಲಿಮಿಟೆಡ್, ಘಟಕ-2, ನಾದ್‌ಕೆಡಿ, ತಾಲ್ಲೂಕು: ಇಂಡಿ, ಜಿಲ್ಲೆ: ವಿಜಯಪುರ | 4,27,877.00 | 2,13,93,850.00 | ಪ್ರಗತಿಯಲ್ಲಿರುತ್ತದೆ |
| 71 | ಕೆಪಿಆರ್ ಶುಗರ್ ಮಿಲ್ ಲಿ., ಆಲುಮೇಲು ಗ್ರಾಮ, ತಾಲ್ಲೂಕು: ಸಿಂದಗಿ, ಜಿಲ್ಲೆ: ವಿಜಯಪುರ. | 10,07,624.00 | 5,03,81,200.00 | ಪ್ರಗತಿಯಲ್ಲಿರುತ್ತದೆ |
| 72 | ಶ್ರೀ ಸಾಯಿಬಸವ ಶುಗರ್ಸ್ ಲಿಮಿಟೆಡ್, ಪೋಸ್ಟ್:ಮಲಘಾಣ, ತಾಲ್ಲೂಕು: ಆಲುಮೇಲು, ಜಿಲ್ಲೆ: ವಿಜಯಪುರ | 2,42,117.00 | 1,21,05,850.00 | ಪ್ರಗತಿಯಲ್ಲಿರುತ್ತದೆ |
| 73 | ನಂದಿ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಕೃಷ್ಣಾನಗರ, ಪೋಸ್ಟ್: ಹೊಸೂರು, ತಾಲ್ಲೂಕು: ಬಬಲೇಶ್ವರ, ಜಿಲ್ಲೆ : ವಿಜಯಪುರ. | 5,02,403.00 | 2,51,20,150.00 | ಪ್ರಗತಿಯಲ್ಲಿರುತ್ತದೆ |
| 74 | ಸಂಗಮನಾಥ ಶುಗರ್ಸ್ ಲಿಮಿಟೆಡ್, ಯರಗಲ್ ಬಿ.ಕೆ. ತಾಲ್ಲೂಕು: ಸಿಂದಗಿ, ಜಿಲ್ಲೆ: ವಿಜಯಪುರ | 6,10,479.00 | 3,05,23,950.00 | ಪ್ರಗತಿಯಲ್ಲಿರುತ್ತದೆ |
| 75 | ಶ್ರೀ ಬಾಲಾಜಿ ಶುಗರ್ಸ್ & ಕೆಮಿಕಲ್ಸ್ ಪ್ರೈ ಲಿಮಿಟೆಡ್, ಯರಗಲ ತಾಲ್ಲೂಕು: ಮುದ್ದೇಬಿಹಾಳ, ಜಿಲ್ಲೆ: ವಿಜಯಪುರ | 9,53,430.00 | 4,76,71,500.00 | ಪ್ರಗತಿಯಲ್ಲಿರುತ್ತದೆ |
| 76 | ಶ್ರೀ ಬಸವೇಶ್ವರ ಶುಗರ್ಸ್ ಲಿಮಿಟೆಡ್, ಕಾರಜೋಳ ಗ್ರಾಮ, ಜಿಲ್ಲೆ: ವಿಜಯಪುರ | 5,93,604.00 | 2,96,80,200.00 | ಪ್ರಗತಿಯಲ್ಲಿರುತ್ತದೆ |
| 77 | ಶ್ರೀ ಭೀಮಾಶಂಕರ್ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಮರಗೂರ, ತಾಲ್ಲೂಕು:ಇಂಡಿ, ಜಿಲ್ಲೆ: ವಿಜಯಪುರ. | 3,80,204.00 | 1,90,10,200.00 | ಪ್ರಗತಿಯಲ್ಲಿರುತ್ತದೆ |

| ಕ್ರ.ಸಂ. | ಕಾರ್ಖಾನೆಯ ಹೆಸರು | 2025-26ನೇ ಸಾಲಿನ ಹಂಗಾಮಿನಲ್ಲಿ ರೈತರು ಕಾರ್ಖಾನೆಗೆ ಕಬ್ಬು ಸರಬರಾಜು ಮಾಡಿದ ಪ್ರಮಾಣ (ಮೆ.ಟನ್‌ಗಳಲ್ಲಿ) | ಸರ್ಕಾರವು ಘೋಷಿಸಿರುವಂತೆ ಪ್ರತಿ ಮೆ.ಟನ್ ಕಬ್ಬಿಗೆ ರೂ.50/- ರಂತೆ ರೈತರಿಗೆ ಸರ್ಕಾರದಿಂದ ಪಾವತಿಸಬೇಕಾಗಿರುವ ಒಟ್ಟು ಮೊತ್ತ (ರೂ.ಗಳಲ್ಲಿ) | ಕಬ್ಬು ಅರೆಯುವ ಕಾರ್ಯದ ಪ್ರಸ್ತುತ ಸ್ಥಿತಿ |
|---|---|---|---|---|
| 1 | 2 | 3 | 4=3*50 | 5 |
| 78 | ಇಂಡಿಯನ್ ಕೇನ್ ಪವರ್ ಲಿ. ಘಟಕ: ಧ್ಯಾನಯೋಗಿ ಶ್ರೀ ಶಿವಕುಮಾರ ಸ್ವಾಮಿಜಿ ಶುಗರ್ಸ್ ಲಿಮಿಟೆಡ್, ಹಿರೇಬೇವನೂರು ಗ್ರಾಮ, ತಾಲ್ಲೂಕು : ಇಂಡಿ ಜಿಲ್ಲೆ: ವಿಜಯಪುರ | 2,22,477.00 | 1,11,23,850.00 | ಪ್ರಗತಿಯಲ್ಲಿರುತ್ತದೆ |
| | **ಒಟ್ಟು** | **53,63,606.00** | **26,81,80,250.00** | |
| | **ವಿಜಯನಗರ ಜಿಲ್ಲೆ** | | | |
| 79 | ಮೈಲಾರ ಶುಗರ್ಸ್ ಲಿ., ಬೀರಬ್ಬಿ, ತಾಲ್ಲೂಕು: ಹೂವಿನಹಡಗಲಿ, ಜಿಲ್ಲೆ :ವಿಜಯನಗರ | 4,01,657.00 | 2,00,82,850.00 | ಮುಕ್ತಾಯಗೊಳಿಸಿದೆ |
| 80 | ಶ್ಯಾಮನೂರು ಶುಗರ್ಸ್ ಲಿ., ದುಗ್ಗಾವತಿ, ತಾಲ್ಲೂಕು: ಹರಪನಹಳ್ಳಿ, ಜಿಲ್ಲೆ:ವಿಜಯನಗರ | 2,62,697.00 | 1,31,34,850.00 | ಮುಕ್ತಾಯಗೊಳಿಸಿದೆ |
| | **ಒಟ್ಟು** | **6,64,354.00** | **3,32,17,700.00** | |
| | **ಯಾದಗಿರಿ ಜಿಲ್ಲೆ** | | | |
| 81 | ಕೋರ್‌ಗ್ರೀನ್ ಶುಗರ್ & ಫ್ಯುಯೆಲ್ಸ್ ಪ್ರೈ. ಲಿಮಿಟೆಡ್. ತುಮಕೂರು ಗ್ರಾಮ, ತಾಲ್ಲೂಕು:ವಡಗೇರೆ, ಜಿಲ್ಲೆ: ಯಾದಗಿರಿ | 4,43,394.00 | 2,21,69,700.00 | ಪ್ರಗತಿಯಲ್ಲಿರುತ್ತದೆ |
| | **ಒಟ್ಟು** | **4,43,394.00** | **2,21,69,700.00** | |
| | **ಒಟ್ಟು ಮೊತ್ತ** | **5,20,47,162.00** | **260,23,58,050.00** | |

1. ಸದರಿ ಅನುದಾನವನ್ನು ಸಂಬಂಧಪಟ್ಟ ಜಿಲ್ಲೆಗಳ ಜಿಲ್ಲಾಧಿಕಾರಿಗಳು ರಾಜ್ಯದ ರೈತರು ರಾಜ್ಯದ ಸಕ್ಕರೆ ಕಾರ್ಖಾನೆಗಳಿಗೆ ದಿನಾಂಕ: 15.02.2026 ರವರೆಗೆ ಪೂರೈಸಿರುವ ಕಬ್ಬಿನ ಪ್ರಮಾಣವನ್ನು ಆಧರಿಸಿ ನೇರವಾಗಿ ರೈತರ ಖಾತೆಗಳಿಗೆ ಹಣ ಜಮಾ ಮಾಡಲು ಕ್ರಮಕೈಗೊಳ್ಳತಕ್ಕದ್ದು.

2. ಕಬ್ಬು ಸರಬರಾಜು ಮಾಡಿದ ರೈತರಿಗೆ ರಾಜ್ಯ ಸರ್ಕಾರದಿಂದ ಪ್ರತಿ ಮೆ.ಟನ್ ರೂ.50/- ರಂತೆ ಬಿಡುಗಡೆ ಮಾಡುವ ಮೊತ್ತದ ಜೊತೆಗೆ ಸರ್ಕಾರದ ಆದೇಶ ಸಂಖ್ಯೆ: ಸಿಐ 324 ಎಸ್‌ಜಿಎಫ್ 2025,

ದಿನಾಂಕ:08.11.2025ರಲ್ಲಿ ನಿಗದಿಪಡಿಸಿದಂತೆ ಕಾರ್ಖಾನೆಗಳಿಂದಲೂ ಸಹ ರೈತರಿಗೆ ಪ್ರತಿ ಮೆ.ಟನ್ ಕಬ್ಬಿಗೆ ರೂ.50/-ರಂತೆ ಹೆಚ್ಚುವರಿ ಬೆಲೆಯನ್ನು ಪಾವತಿಸಲು ಸಂಬಂಧಪಟ್ಟ ಜಿಲ್ಲೆಗಳ ಜಿಲ್ಲಾಧಿಕಾರಿಗಳು ಕ್ರಮ ಕೈಗೊಳ್ಳತಕ್ಕದ್ದು.

3. ಸದರಿ ಆದೇಶದಲ್ಲಿ ಬಿಡುಗಡೆಗೊಳಿಸಿದ ಅನುದಾನದಲ್ಲಿ ಕರ್ನಾಟಕ ರಾಜ್ಯದ ಸಕ್ಕರೆ ಕಾರ್ಖಾನೆಗಳಿಗೆ 2025-26ನೇ ಹಂಗಾಮಿನಲ್ಲಿ ಕಬ್ಬು ಸರಬರಾಜು ಮಾಡಿದ / ಮಾಡುವ ಕರ್ನಾಟಕ ರಾಜ್ಯದ ರೈತರಿಗೆ ಮಾತ್ರ ಪ್ರತಿ ಮೆ.ಟನ್ ಕಬ್ಬಿಗೆ ರೂ.50/-ರಂತೆ ಪಾವತಿಸತಕ್ಕದ್ದು.

4. ಸಕ್ಕರೆ ಕಾರ್ಖಾನೆಗಳಿಗೆ ದಿನಾಂಕ:15.02.2026 ರವರೆಗೆ ರೈತರು ಕಬ್ಬು ಸರಬರಾಜು ಮಾಡಿದ ಪ್ರಮಾಣಕ್ಕೆ ಅನುಗುಣವಾಗಿ ಪ್ರಸ್ತುತ ಅನುದಾನ ಬಿಡುಗಡೆ ಮಾಡಲಾಗಿರುತ್ತದೆ. ಪ್ರಸ್ತುತ 2025-26ನೇ ಸಾಲಿನ ಹಂಗಾಮು ಚಾಲ್ತಿಯಲ್ಲಿರುವುದರಿಂದ ನಂತರದ ಅವಧಿಯಲ್ಲಿ ಅರೆಯಬಹುದಾದ ಕಬ್ಬಿನ ಪ್ರಮಾಣಕ್ಕೆ ಅನುಗುಣವಾಗಿ ಎರಡನೇ ಮತ್ತು ಅಂತಿಮ ಕಂತಿನಲ್ಲಿ ಇನ್ನುಳಿದ ಅನುದಾನವನ್ನು ಬಿಡುಗಡೆ ಮಾಡಲಾಗುವುದು.

